NON-OFFICIAL RESOLUTIONS

Re: Implementation of Malaprabha Project.

(Debate continued.)

ಶ್ರೀ ಪಿ. ಜಿ. ಸಿದ್ಧಾಂತಿ (ಮುದ್ದೇಬಿಹಾಳ್).— ಸ್ವಾಮಿ, ನವಿಲತೀರ್ಥ ಬಹಳ ಸುಂದರವಾದ ಸ್ಥಳ. ಈ ಯೋಜನೆಯ ನಿರ್ಮಾಣಕ್ಕೆ ಇಂಥ ಅನುಕೂಲವಾದ ಸ್ಥಳ ಬೇರೆ ಸಿಕ್ಕುವುದಿಲ್ಲ. ಆಚೆ ಈಚೆ ನಾಲ್ಕು ನೂರು ಐದುನೂರು ಅಡಿ ಎತ್ತರವಿರುವ ಗುಡ್ಡಗಳಿರುವುದರಿಂದ ಕಟ್ಟೆ ಕಟ್ಟುವುದು ಬಹಳ ಸುಲಭ. ಅಂದಮೇಲೆ ಇಂಥ ಪ್ರಶಸ್ತವಾದ ಸ್ಥಳ ಸಿಕ್ಕುವುದು ಕಠಿಣ. ಆದುದರಿಂದ ಈ ಯೋಜನೆಯನ್ನು ತೀವ್ರ ತೆಗೆದುಕೊಳ್ಳಬೇಕೆಂದು ನನ್ನ ವಿನಂತಿ. ಧಾರವಾಡ ಜಿಲ್ಲೆಯ ಜನರು ಈ ಯೋಜನೆಯನ್ನು ತೀವ್ರ ತೆಗೆದುಕೊಳ್ಳಬೇಕೆಂದು ಒತ್ತಾಯ ಮಾಡುತ್ತಿದ್ದಾರೆ. ಮೊನ್ನೆ ಶ್ರೀ ನಿಜಲಿಂಗಪ್ಪಅವರ ಅಧ್ಯಕ್ಷತೆಯಲ್ಲಿ ಒಂದು ಸಮ್ಮೇಳನವನ್ನು ನಡೆಸಿದರು. ಅದರಲ್ಲಿಯೂ ಈ ವಿಷಯವು ಚರ್ಚೆಗೆ ಬಂದು ಈ ಬಗ್ಗೆ ಒಂದು ಸಮಿತಿಯನ್ನು ಮಾಡಿ ಒತ್ತಾಯ ಮಾಡಬೇಕೆಂದು ತೀರ್ಮಾನ ಮಾಡಿದರು. ಸಮಿತಿಯನ್ನು ಮಾಡಿದರೋ ಇಲ್ಲವೋ ಗೊತ್ತಿಲ್ಲ. ಅಂತು ಈ ವಿಚಾರದಲ್ಲಿ ಅಲ್ಲಿನ ಜನರಿಗೆ ಬಹಳ ಆಸಕ್ತಿ ಇದೆ. ಆ ಕ್ಷೇತ್ರವೇನಿದೆಯೋ ಅದರ ಪ್ರತಿನಿಧಿ ಲೋಕಸಭೆಯಲ್ಲಿದ್ದಾರೆ. ಅವರು ಮಂತ್ರಿಗಳಾಗಿದ್ದಾರೆ. ಹುಬ್ಬಳ್ಳಿ, ನವಲಗುಂದ, ನರಗುಂದ, ಗದಗ್ ಈ ಕ್ಷೇತ್ರಗಳ ಪ್ರತಿನಿಧಿ ಮಾನ್ಯ ಮಂತ್ರಿಗಳಿದ್ದಾರೆ. ಈ ಕೆಲಸವನ್ನು ತೆಗೆದುಕೊಳ್ಳಬೇಕೆಂದು ಭಾರತ ಸರ್ಕಾರವು ಹೇಳಿದರೆ ನಾವು ತೆಗೆದುಕೊಳ್ಳುತ್ತೇವೆಂದು ನಮ್ಮ ಸರ್ಕಾರದವರು ಹೇಳುತ್ತಾರೆ. ಭಾರತ ಸರ್ಕಾರದಲ್ಲಿ ಆ ಪ್ರದೇಶದ ಪ್ರತಿನಿಧಿಗಳೇ ಮಂತ್ರಿಯಾಗಿರುವುದರಿಂದ ಇವರು ಇದನ್ನು ಬೇಗನೆ ತೆಗೆದುಕೊಂಡು ಭಾರತ ಸರ್ಕಾರದಿಂದ ಮಂಜೂರು ಮಾಡಿಸಿಕೊಟ್ಟರೆ ಇವರು ಏಕ್‌ದಮ್ ತೆಗೆದುಕೊಳ್ಳುತ್ತಾರೆಂದು ಹೇಳುತ್ತಾರೆ. ಆದರೆ ಇದರಲ್ಲಿ ಇನ್ನೊಂದು ವಿಷಯವಿದೆ. ಭಾರತ ಸರ್ಕಾರದವರು ಒಂದು ನೆಪ ಹೇಳುತ್ತಾರೆ. ಕೃಷ್ಣಾ ಬೇಸಿನ್ ನೀರಿನ ಹಂಚಿಕೆ ಪೂರ್ತಿಯಾಗಿಲ್ಲವಾದುದರಿಂದ ಈ ಯೋಜನೆಯನ್ನು ತೆಗೆದುಕೊಳ್ಳುವುದಕ್ಕಾಗುತ್ತದೆಯೋ ಇಲ್ಲವೋ ಯೋಚನೆ ಮಾಡಬೇಕಾಗಿದೆ ಎಂದು ಅವರು ಹೇಳುವ ಈ ಕಾರಣ ಬಹಳ ವಿಚಿತ್ರವಾಗಿದೆ. ಕೃಷ್ಣಾ ಬೇಸಿನ್ ಎಂದರೆ ಕೃಷ್ಣಾ ನದಿ ಮತ್ತು ಅದರ ಉಪನದಿಗಳೆಲ್ಲವೂ ಸೇರಿವೆ. ಈ ಕೃಷ್ಣಾ ಬೇಸಿನ್‌ನಲ್ಲಿ 12 ನೂರು ಟಿ.ಎಂ.ಸಿ. ಘನ ಅಡಿ ನೀರು ಹರಿಯುತ್ತದೆ. ಅಪ್ಪರ್ ಕೃಷ್ಣಾ, ಮಲಪ್ರಭ, ಘಟಪ್ರಭಾ, ಕೊಯ್ನಾ ಮತ್ತು ಆಂಧ್ರ ಪ್ರದೇಶದ ನಾಗಾರ್ಜುನ ಸಾಗರ, ಈ ಎಲ್ಲ ಯೋಜನೆಗಳನ್ನೂ ಕಾರ್ಯಗತ ಮಾಡಿದರೂ ಕೃಷ್ಣಾ ಬೇಸಿನ್ ನೀರಿನ ಅರ್ಧದಷ್ಟು ನೀರನ್ನೂ ಉಪಯೋಗಿ ಮಾಡುವುದಕ್ಕಾಗುವುದಿಲ್ಲ. ಹೀಗಿರುವಾಗ ಭಾರತ ಸರ್ಕಾರ ಕೃಷ್ಣಾ ಬೇಸಿನ್ ನೀರಿನ ಹಂಚಿಕೆಯ ನೆಪವನ್ನು ಹೇಳುವುದು ವಿಚಿತ್ರವಾಗಿದೆ. ಈ ಹೊತ್ತು ಈ ಎಲ್ಲ ಯೋಜನೆಗಳನ್ನು ಮಾಡಿದರೂ ಕೃಷ್ಣಾ ಬೇಸಿನ್ ನೀರನ್ನೆಲ್ಲ ಉಪಯೋಗ ಮಾಡುವುದಕ್ಕಾಗುವುದಿಲ್ಲ. ಈಗ ಆ ನೀರು ವ್ಯರ್ಥವಾಗಿ ಬಂಗಾಳಾ ಸಾಗರಕ್ಕೆ ಹೋಗಿ ಸೇರುತ್ತಿದೆ. ಹೀಗಿರುವಾಗ ಈ ಒಂದು ಕುಂಟು ನೆಪವನ್ನು ಹೇಳಬಾರದು. ಈ ಜಲಾಶಯವನ್ನು ಮಾಡುವುದರಿಂದ ಕೇವಲ 12 ನೂರು ಮಿಲಿಯನ್ ಘನ ಅಡಿ ನೀರಷ್ಟೇ ಉಪಯೋಗವಾಗುವುದು. ಒಟ್ಟು ನೀರಿರುವುದು 47 ಮಿಲಿಯನ್ ಘನ ಅಡಿ. ಹೀಗಿರುವಾಗ ಈ ಮಲಪ್ರಭಾ ಯೋಜನೆಯನ್ನು ಮಾಡುವುದರಿಂದ ತೊಂದರೆಯೇನು? ಅದಕಾರಣ ಈ ರೀತಿ ಕುಂಟು ನೆಪ ಹೇಳಬಾರದು.

ಇನ್ನೊಂದು ಸಂಗತಿಯೇನೆಂದರೆ, ನಮ್ಮ ಸರ್ಕಾರಕ್ಕೆ ಈ ನಿರ್ಣಯದ ಬಗ್ಗೆ ಸ್ವಲ್ಪ ಅಂಜಿಕೆ ಬಂದಿದೆ. ಮೂರನೆಯ ಯೋಜನೆಯಲ್ಲಿ ಸೇರಿಸುವುದಕ್ಕೆ ಕೂಡಲೆ ಕಾರ್ಯರೂಪಕ್ಕೆ ತರಬೇಕೆಂದು ಇದರಲ್ಲಿ ಹೇಳಿದ್ದಾರೆ; ಆದುದರಿಂದ wording ಸ್ವಲ್ಪ ಬದಲಾಯಿಸಬೇಕಾಗಿತ್ತು ಎಂದು ಹೇಳಬಹುದು. ಈ ಗೊತ್ತುವಳಿ Not happily worded ಎಂದು ಹೇಳಬಹುದು, ಅವರೇ ಎರಡನೆಯ ಯೋಜನೆಯಲ್ಲಿ ಹಾಕಿದ್ದಾರೆ; ಹೀಗಿರುವಾಗ ನಾವು ಮೂರನೆಯ ಯೋಜನೆಯಲ್ಲಿ ಹಾಕಿ ಎಂದೇಕೆ ಕೇಳಬೇಕು? 1959ನೆಯ ಇಸವಿಯಲ್ಲಿ ನಮಗೆ ಮೂರನೆಯ ಯೋಜನೆಯ ಬಗ್ಗೆ ಒಂದು ಪುಸ್ತಕವನ್ನು ಕೊಟ್ಟಿದ್ದಾರೆ, ಅದರಲ್ಲಿ ಎರಡನೆಯ ಯೋಜನೆಯ spill over will be taken up in the Third Plan ಎಂದು ಹೇಳಿದ್ದಾರೆ. ಎರಡನೆಯ ಯೋಜನೆಯಲ್ಲಿ ಹಾಕಿದ ಮೇಲೆ ಈಗಲೇ ಇದನ್ನು ಮಾಡಿಕೊಡಿ ಎಂದು ನಾವು ಕೇಳುವುದು ಸೂಕ್ತ. ಮೂರನೆಯ ಯೋಜನೆಯಲ್ಲಿ ಹಾಕಿ ಎಂದು ಕೇಳುವುದು ನಮಗೆ ಜರೂರಿರಲಿಲ್ಲ. ಆದುದರಿಂದ 1960-61 ರಲ್ಲೇ ಇದನ್ನು ಪ್ರಾರಂಭ ಮಾಡಿ ಎಂದು ವಿನಂತಿ ಮಾಡುತ್ತೇನೆ.

ಇನ್ನೊಂದು ವಿಷಯವೇನೆಂದರೆ, ಸರ್ಕಾರದ ಮನಸ್ಸಿಗೆ ಬಂದರೆ Core of the plan ನಲ್ಲಿ ಇಲ್ಲದಿದ್ದರೂ ತೆಗೆದುಕೊಂಡುಬಿಡುತ್ತಾರೆ. Sharavathi project is not in the core of the Plan. ಆದುದರಿಂದ ಅದನ್ನು ತೆಗೆದುಕೊಳ್ಳುವುದಕ್ಕಾಗುವುದಿಲ್ಲ ಎಂದು ಹೇಳಿದರು. ಆದರೆ ಈಗ ಅದನ್ನು ತೆಗೆದುಕೊಂಡಿದ್ದಾರೆ. ಹೀಗಿರುವಾಗ ಇದನ್ನು ಯೋಜನೆಯ ಗರ್ಭದಲ್ಲೇ ಹಾಕಿದ್ದಾರೆ, ಏಕೆ ತೆಗೆದುಕೊಳ್ಳಬಾರದು? ಕೆಲವು ಸಂದರ್ಭಗಳಲ್ಲಿ in anticipation of sanction ತೆಗೆದುಕೊಳ್ಳುತ್ತೇವೆಂದು ಹೇಳುತ್ತಾರೆ; ಹಾಗೆಯೇ ಇದನ್ನೂ ತೆಗೆದುಕೊಳ್ಳುವುದಕ್ಕೇನು ಕಷ್ಟ? ಈ ವರ್ಷ ಎಷ್ಟು ಖರ್ಚು ಮಾಡಬೇಕೋ ಅದನ್ನು ನಮ್ಮ ಸರ್ಕಾರ ಖರ್ಚು ಮಾಡಿದರೆ ಮುಂದಿನ ವರ್ಷ ಮೂರನೆಯ ಯೋಜನೆಯಲ್ಲಿ ಬರುತ್ತದೆ. ಆಗ ಅದರಲ್ಲಿ ಖರ್ಚು ಮಾಡುತ್ತಾರೆ. ಆದುದರಿಂದ ನಮ್ಮ ಸರ್ಕಾರದವರು ಇಂಡಿಯಾ ಸರ್ಕಾರದ ಮಂಜೂರಾತಿಯನ್ನು ನಿರೀಕ್ಷೆ ಮಾಡಿ ಇದನ್ನು ತೆಗೆದುಕೊಳ್ಳಬೇಕೆಂದು ನನ್ನ ವಿನಂತಿ. ಸರ್ಕಾರದವರು ಈ ನಿರ್ಣಯ not happily worded ಎಂದು ಹೇಳದೆ ಕೆಲಸವನ್ನು ಪ್ರಾರಂಭ ಮಾಡಬೇಕೆಂದು ಹೇಳುತ್ತೇನೆ. ನನ್ನ ಜಿಲ್ಲೆಗೆ ಅನುಕೂಲ ಬರುತ್ತದೆಂದು ನಾನು ಹೇಳುತ್ತಿಲ್ಲ. ಬಂದರೂ ಬಾದಾಮಿ ತಾಲ್ಲೂಕಿನ ಜಾಲಿಹಾಳ್, ಬೇಲೂರು, ಈ ಎರಡು ಹಳ್ಳಿಗಳ ಜನರಿಗೆ ಮುಟ್ಟುತ್ತದೆ ಇದರ ಅನುಕೂಲ. ಯಾವ ಒಂದು ಪ್ರದೇಶದ ವಿಚಾರವಿಲ್ಲ. ಯಾವುದಾದರೂ ಕ್ಷಾಮ ಪೀಡಿತ ಪ್ರದೇಶಕ್ಕೆ ಅನುಕೂಲವಾಗಲೆಂಬುದು ನನ್ನ ಉದ್ದೇಶ. ಈ ವರ್ಷ ಅಲ್ಲಿ ಕ್ಷಾಮ ಪರಿಸ್ಥಿತಿ ಇದೆ. ಬರಗಾಲಕ್ಕೆ ತುತ್ತಾದ ಪ್ರದೇಶಗಳಲ್ಲಿ ರಸ್ತೆ ಮಾಡಿಸುತ್ತಾರೆ, ಬಾವಿ ತೋಡಿಸುತ್ತಾರೆ. ಇದಕ್ಕೆ ಬದಲಾಗಿ ಈ ಮಲಪ್ರಭಾ ಯೋಜನೆಗೆ ಸಂಬಂಧಪಟ್ಟ ಹಾಗೆ ನಾಲೆ ಮಾಡಿಸಿದರೆ

(ಶ್ರೀ ಪಿ. ಜಿ. ಸಿದ್ಧಾಂತಿ)

ಅನುಕೂಲವಾಗುತ್ತದೆ. ಘಟಪ್ರಭಾ ಯೋಜನೆಯಲ್ಲಿದ್ದ ಲೇಬರ್ ಉಪಯೋಗ ಮಾಡಿಕೊಂಡು ಈ ಕ್ಷಾಮ ಕಾಲದಲ್ಲಿ ಈ ನಾಲೆಯನ್ನು ಅಗೆಸಲು ಕೈ ಹಚ್ಚಬೇಕೆಂದು ವಿನಂತಿ ಮಾಡುತ್ತೇನೆ. ಇಷ್ಟು ಹೇಳಿ ನನ್ನ ಭಾಷಣವನ್ನು ಮುಗಿಸುತ್ತೇನೆ.

ಶ್ರೀ ಸಿ. ಎಸ್. ಹುಲಕೋಟಿ (ಮುಂಡರಗಿ).—ಶ್ರೀ ಆರ್. ಎಂ. ಪಾಟೀಲರು ತಂದಿರತಕ್ಕ ಈ ನಿರ್ಣಯವನ್ನು ಸಮರ್ಥಿಸುವ ಸಲುವಾಗಿ ನಾನು ನಿಂತಿದ್ದೇನೆ. ಧಾರವಾಡ ಜಿಲ್ಲೆಯಲ್ಲಿ 5 ನದಿಗಳು ಹರಿಯುತ್ತಿವೆ. ದಕ್ಷಿಣದಲ್ಲಿ ತುಂಗಭದ್ರ ನದಿ, ಉತ್ತರದಲ್ಲಿ ಮಲಪ್ರಭಾ ನದಿ, ಮಧ್ಯದಲ್ಲಿ ವರದಾ ನದಿ ಮತ್ತು ಶಾಲ್ಮಲಾ ನದಿ, ಹಾನಗಲ್ ತಾಲ್ಲೂಕಿನಲ್ಲಿ ಧರ್ಮಾ ನದಿ, ಹೀಗೆ ಐದು ನದಿಗಳು ಇವೆ, ಆದರೂ ಇವುಗಳಲ್ಲಿ ಸ್ವಲ್ಪವೇ ನೀರು ಉಪಯೋಗ ಮಾಡುತ್ತಿದೆ, ಅದೂ ಧರ್ಮಾ ನದಿಯಿಂದ ಮಾತ್ರ. ಅತ್ತ ತುಂಗಭದ್ರ ನದಿಯಿಂದ ಯಾವುದೇ ಯೋಜನೆಯನ್ನು ಕೈಕೊಂಡು ಅದರಿಂದ ಧಾರವಾಡ ಜಿಲ್ಲೆಗೆ ಉಪಯೋಗವಾಗುವ ಹಾಗೆ ಮಾಡುವುದಕ್ಕೆ ಸಾಧ್ಯವೂ ಇಲ್ಲವೆಂದು ನಾನು ಹೇಳಬಯಸುತ್ತೇನೆ. ಅಂತೆಯೇ ವರದಾ ನದಿಯಿಂದಲೂ ಹೆಚ್ಚು ಉಪಯೋಗ ಪಡೆಯಲು ಶಕ್ಯವೂ ಇಲ್ಲ. ಇನ್ನು ಉಳಿದಿರುವುದು ಮಲಪ್ರಭಾ ಮಾತ್ರ. ಇದನ್ನು ತೀವ್ರವಾಗಿ ಕೈಕೊಳ್ಳಬೇಕೆಂದು ಹೇಳುತ್ತೇನೆ.

ಧಾರವಾಡ ಪ್ರದೇಶವನ್ನು ಮೂರು ಭಾಗ ಮಾಡಬಹುದು. ಒಂದು ಮಲೆನಾಡು ಪ್ರದೇಶ, ಇನ್ನೊಂದು ಗಡಿ ನಾಡು ಮೂರನೆಯದು ಬರಗಾಲ ಪ್ರದೇಶ, ಒಟ್ಟಿನ ಮೇಲೆ ಧಾರವಾಡ ಜಿಲ್ಲೆಯ ಬಹುಭಾಗ ಅದರಲ್ಲೂ ಪೂರ್ವ ಭಾಗ ಮೇಲಿಂದ ಮೇಲೆ ಬರಗಾಲಕ್ಕೆ ತುತ್ತಾಗುತ್ತಿದೆ. ನರಗುಂದ ಪೇಟೆ, ನರಗುಂದ, ಹುಬ್ಬಳ್ಳಿ, ರೋಣ, ಮುಂಡರಿಗೆ ಪೇಠ, ಶಿರಹಟ್ಟಿ ತಾಲ್ಲೂಕಿನ ಕೆಲವು ಭಾಗಗಳು ಬರಗಾಲದ ಪ್ರದೇಶಗಳೆಂದೇ ಸಾರಲ್ಪಟ್ಟಿವೆ. ಎಲ್ಲಕ್ಕಿಂತ ಮಹತ್ವದ ಭಾಗ ಎಂದರೆ ಧಾರವಾಡದ ಪೂರ್ವ ಭಾಗ. ಇದು ಗುಡ್ಡಗಾಡು ಪ್ರದೇಶವಲ್ಲ, ಬಯಲು ಪ್ರದೇಶ. ಸಾಕಾದಷ್ಟು ನೀರು ಒದಗಿದರೆ ಭೂಮಿಯ ಉಪಯೋಗ ಹೆಚ್ಚುತ್ತದೆಂದು ಹೇಳುತ್ತೇನೆ. ಈ ಪ್ರದೇಶದಲ್ಲಿ 18 ಇಂಚಿನಿಂದ 22 ಇಂಚಿನವರೆಗೆ ಸರಾಸರಿ ಮಳೆಯಾಗುತ್ತದೆ. ಆದರೂ ಸಹ ಕಲವು ವೇಳೆ ಹೆಚ್ಚು ಮಳೆಯಾಗಿಯೂ, ಇನ್ನು ಕೆಲವು ವೇಳೆ ಸಕಾಲಕ್ಕೆ ಬಾರದೆಯೂ, ಬಂದ ಮಳೆಯೂ ಉಪಯೋಗವಾಗುತ್ತಿಲ್ಲ. ಬಿತ್ತಿದ ಬೆಳೆಯೂ ಅನೇಕ ವೇಳೆ ಕೈಗೆ ಬರುತ್ತಿಲ್ಲ. ಇದೇ ಪ್ರದೇಶದಲ್ಲಿ ಹಿಂದೆ ಡೌಗಿ ಬರಗಾಲ, ರಾಗಿ ಬರಗಾಲ ಎಲ್ಲಾ ಬಂದಿತ್ತೆಂದು ನಮ್ಮ ಹಿಂದಿನವರು ಹೇಳುತ್ತಿದ್ದರು. ಡೌಗಿ ಬರಗಾಲದಲ್ಲಿ ಬಯು ಹೆಣಗಳನ್ನೇ ಎಲ್ಲೆಲ್ಲೂ ಕಾಣುತ್ತಿದ್ದರಂತೆ. ರಾಗಿ ಬರಗಾಲದಲ್ಲಿ ತಿನ್ನುವುದಕ್ಕೆ ರಾಗಿ ಕೂಡ ಸಿಕ್ಕುತ್ತಿರಲಿಲ್ಲವಂತೆ. ಆದುದರಿಂದಲೇ ಒಂದು ಫ್ಯಾಮಿನ್ ಕೋಡು ಕೂಡ ಮಾಡಿದ್ದರು. ಇಂಥ ಬರಗಾಲ ಪೀಡಿತ ಪ್ರದೇಶಕ್ಕೆ ಇಲ್ಲಿಯವರೆಗೂ ಯಾವ ತೆರದ ಸೌಕರ್ಯವನ್ನೂ ಮಾಡಿಕೊಟ್ಟಿಲ್ಲವೆಂದು ನಾನು ದುಃಖದಿಂದ ಹೇಳುತ್ತೇನೆ. ಈ ನಿರ್ಣಯವನ್ನು ತಂದಂಥ ಪಾಟೀಲರು ಬರಗಾಲದ ಬವಣೆಗೆ ತುತ್ತಾಗಿ ಕಳವಳಗಳನ್ನು ಸಹಿಸಿ ಕಷ್ಟನಷ್ಟಗಳನ್ನು ಅರಿತವರು. ಶ್ರೀ ಎ. ಆರ್. ಪಾಟೀಲರು ಬರಗಾಲದ ಹಿಡಿತಕ್ಕೆ ಸಿಕ್ಕದ ಕ್ಷೇತ್ರವಾದ ನರಗುಂದದಿಂದ ಬಂದವರು. ಎಂ. ಆರ್. ಪಾಟೀಲರೂ ಅದೇ ಭಾಗದಿಂದ ಬಂದವರು. ಮೇಲಾಗಿ ಈ ಕಷ್ಟಗಳನ್ನು ಅನುಭವಿಸಿದ ಸಿದ್ಧಾಂತಿಯವರೇ ಈ ನಿರ್ಣಯವನ್ನು ತಂದಿದ್ದಾರೆ. ಇಂಥಾ ನಿರ್ಣಯಕ್ಕೆ ಬೆಂಬಲ ಕೊಡಲಿಕ್ಕೆ ಸಂತೋಷವಾಗುತ್ತದೆ. ಬರಗಾಲದ ಜನರ ಕಷ್ಟ ಅಷ್ಟಿಷ್ಟಲ್ಲ. ಜನರಿಗೆ ಊಟಕ್ಕೆ ಸಿಕ್ಕುವುದಿಲ್ಲವೆಂಬುದು ಒಂದೇ ಅಲ್ಲ, ದನಕರುಗಳಿಗೆ ಮೇವು ಹೊಟ್ಟು ಸಿಕ್ಕದೆ ಆ ಜನರು ಊರನ್ನೇ ಬಿಟ್ಟು ಬೇರೆ ದೇಶಗಳಿಗೆ ವಲಸೆ ಹೋಗಬೇಕಾದ ಪ್ರಸಂಗ ಬರುತ್ತದೆ. ಮನೆ ಅಸ್ತಿ ಪಾಸ್ತಿಗಳನ್ನು ಬಿಟ್ಟು ಮಕ್ಕಳು ಮರಿಗಳನ್ನು ಕಟ್ಟಿಕೊಂಡು ಹೀಗ ಮೂರು ನಾಲ್ಕು ಬಾರಿ ಹೊರಗೆ ಹೋಗಿರುವ ಸಂದರ್ಭಗಳಿವೆ. ಕ್ಷಾಮ ಬಂತೆಂದರೆ ಮುಖ್ಯವಾಗಿ ಕುಡಿಯುವ ನೀರಿನ ಅಭಾವ ಜಾಸ್ತಿಯಾಗುತ್ತದೆ. ಕುಡಿಯುವ ನೀರಿನ ಅಭಾವದ ಪರಿಣಾಮ ವೇನೇನಾಗುತ್ತದೆ ಎಂಬುದನ್ನು ಸವಿಸ್ತಾರವಾಗಿ ಹೇಳಬೇಕೆಂದು ನನಗೆ ಅನಿಸುತ್ತದೆ. ಇಲ್ಲಿ ಸವಳು ನೀರಿನ ಬಾವಿಗಳು ಇರುವುದರಿಂದ ಆ ಬಾವಿಗಳಿಂದ ಕುಡಿಯುವ ನೀರಿನ ಸೌಕರ್ಯ ತಗೆದುಕೊಳ್ಳಲಿಕ್ಕೆ ಸಾಧ್ಯವಾಗದಂಥ ಪರಿಸ್ಥಿತಿ ಇದೆ. ಆದುದರಿಂದ ಇಲ್ಲಿ ಕುಡಿಯುವ ನೀರಿನ ಸೌಕರ್ಯ ಒದಗಿಸಬೇಕೆಂದರೆ ಒಂದೇ ಒಂದು ಮಾರ್ಗ. ಕೆರೆ ಕಟ್ಟಿಸಿ ಅದರಲ್ಲಿ ಮಳೆ ನೀರನ್ನು ಸಂಗ್ರಹಿಸಿ ಅದನ್ನು ವರ್ಷಾನುಗಟ್ಟಲೆ ಉಪಯೋಗಿಸುವ ಪರಿಸ್ಥಿತಿ ಇದೆ. ಅದಕ್ಕೆ ಬದಲಾಗಿ ಈ ಪ್ರಾಜೆಕ್ಟನ್ನು ತೆಗೆದುಕೊಂಡದ್ದೇ ಆದರೆ ಆ ಪರಿಸ್ಥಿತಿ ಸರಿಹೋಗುವ ಸಂಭವ ಇದೆ. ಈ ಕಾಲುವೆ ಎಲ್ಲಿ ಬರುತ್ತದೆ ಎಂದರೆ ಸವಳು ಭೂಮಿಯಲ್ಲಿ ಬರುತ್ತದೆ. ಅಲ್ಲಿ ಈ ಕಾಲುವೆ ಹಾಯ್ದು ಹೋದರೆ ಕುಡಿಯುವ ನೀರಿನ ಸೌಕರ್ಯ ಸಹ ಒದಗಿಸುವುದಕ್ಕೆ ಸಾಧ್ಯವಾಗುತ್ತದೆ. ಸ್ವಾಮಿ, ಈ ಪ್ರದೇಶದ ಹಳ್ಳಿ ಜನರು ಈ ನೀರಿನ ಸಲುವಾಗಿ ಎಲ್ಲೆಲ್ಲಿಗೆ ಹೋಗಬೇಕಾಗುತ್ತದೆ ಎಂಬುದನ್ನು ಸ್ವಲ್ಪ ಹೇಳಿದರೆ ಅದು ಸರ್ಕಾರದವರ ಗಮನಕ್ಕೆ ಬಂದು ಇದರ ಮಹತ್ವ ಹೆಚ್ಚು ಕಂಡುಬರುತ್ತದೆ ಎಂದು ಅನಿಸುತ್ತದೆ. ಈ ಹಳ್ಳಿಗಳಲ್ಲಿ ವಾಸಮಾಡತಕ್ಕ ಜನರು ಕೆರೆಯಿಂದ ನೀರು ಅರಬು ಆದರೆ ಎರಡು ಮೈಲಿಯಿಂದ ಐದು-ಆರು ಮೈಲಿ ದೂರ ಹೋಗಿ ತರುವಂಥ ಪ್ರಸಂಗ ಮೇಲಿಂದ ಮೇಲೆ ಬರುತ್ತಾ ಇದೆ. ಅರಬು ಬಂದರೆ ಬಹಳ ಕಷ್ಟ. ಮೇಲಿಂದ ಮೇಲೆ ಎರಡು ಮೂರು ವರ್ಷಕ್ಕೆ ಒಂದೊಂದು ಸಾರಿ ಈ ಪರಿಸ್ಥಿತಿ ಬಂದೇ ಬರುತ್ತದೆ ಎಂದು ಖಂಡಿತವಾಗಿ ಹೇಳಲಿಕ್ಕೆ ಬರುತ್ತದೆ. ನನ್ನ ಸ್ವಂತ ಅನುಭವದಿಂದ ಈ ಮಾತನ್ನು ಹೇಳಬಯಸುತ್ತೇನೆ. ಆ ಕುಡಿಯುವ ನೀರನ್ನು ತರಲಿಕ್ಕೆ ಹೋಗಬೇಕಾದರೂ ಸಹ ಒಕ್ಕಲುತನ ಇರತಕ್ಕವರು ಎರಡು ಎತ್ತು, ಒಂದು ಚಕ್ಕಡಿ, 2 ಆಳು ಇಡಿಯ ಒಂದು ದಿವಸ ಅಥವಾ ಒಂದು ಒಪ್ಪತ್ತು ನೀರು ತರುವುದರ ಸಲುವಾಗಿ ಕಳೆಯಬೇಕಾಗುತ್ತದೆ. ಆಗಲೂ ಸಹಿತ ಅಲ್ಲಿ ಸಾಕಾದಷ್ಟು ನೀರು ಇಲ್ಲದೆ ಇರುವುದರಿಂದ ಉಸುಬನ್ನು ತೆಗೆದು ವರ್ತಿ ತೋಡಿ ಚಿಪ್ಪಿನಿಂದ ನೀರು ತೆಗೆದು ತರುವ ಪ್ರಸಂಗ ಮೇಲಿಂದ ಮೇಲೆ ಬರುತ್ತಾ ಇದೆ. ಇದನ್ನು ಕಂಡರೆ ಬಹಳ ದುಃಖ ಅನ್ನಿಸುತ್ತದೆ. ಇಂಥ ಕ್ಷಾಮ ಪರಿಸ್ಥಿತಿಯನ್ನು ನಿವಾರಣೆ ಮಾಡಬೇಕಾದರೆ ಈ ಯೋಜನೆ ತೀವ್ರ ತೆಗೆದುಕೊಳ್ಳುವುದು ಅವಶ್ಯಕ ಇದೆ ಎಂದು ಅನಿಸುತ್ತದೆ. ಒಂದು ಚಮತ್ಕಾರದ ಸಂಗತಿ ಹೇಳಬೇಕೆಂದರೆ, ಈ ಸಂಗತಿ ಸುಳ್ಳು ಅಲ್ಲ. ನಿಜವಾದ ಸಂಗತಿ. ಆ ಭಾಗದ ಜನರಿಗೆ ಯಾರಾದರೂ ನೀರು ಇದ್ದ ಪ್ರದೇಶದವರು ಕನ್ಯಾ ಕೊಡಬೇಕೆಂದರೆ, ಬರಗಾಲ ಪ್ರದೇಶ ಇದೆ, ಹೆಣ್ಣು ಮಕ್ಕಳನ್ನು ಈ ಭಾಗಕ್ಕೆ ಕೊಡುವುದಿಲ್ಲ, ನೀರಿನ

ಸೌಕರ್ಯ ಇರುವ ಪ್ರದೇಶಕ್ಕೆಮಾತ್ರ ಕೊಡುತ್ತೇವೆ ಎಂದು ಎಷ್ಟೋ ಸಾರಿ ಹೇಳಿದ್ದಾಗಿದೆ. ಆದುದರಿಂದ ಈ ಕುಡಿಯುವ ನೀರಿನ ಅಭಾವವನ್ನು ದೂರ ಮಾಡಲಿಕ್ಕೆ ಅದರೊಸಹಿತ ಈ ಯೋಜನೆಯನ್ನು ತೀವ್ರ ತೆಗೆದುಕೊಳ್ಳಬೇಕೆಂದು ಸರ್ಕಾರದವರಿಗೆ ಒತ್ತಾಯದಿಂದ ಹೇಳಬಯಸುತ್ತೇನೆ. ಅಲ್ಲದೆ ದನ ಕರುಗಳಿಗೆ ಸ್ನಾನವಾಡಿಸಿದಂಥ ನೀರನ್ನು ತಿರುಗಿ ಸ್ವಚ್ಛವಾಡದೇ ಕುಡಿಯುವಂಥ ಪ್ರಸಂಗ ಸಹಿತ ಮೇಲಿಂದ ಮೇಲೆ ಬರುತ್ತಾ ಇದೆ. ಆದುದರಿಂದ ಈ ಯೋಜನೆಯನ್ನು ತೀವ್ರ ಕೈಕೊಳ್ಳತಕ್ಕದ್ದು ಆವಶ್ಯಕ ಎಂದು ಹೇಳಬಯಸುತ್ತೇನೆ.

3-30 P.M.

ಮತ್ತೊಂದು ಸಂಗತಿ ಮೊದಲೇ ಹೇಳಿದಂತೆ ಇಲ್ಲಿನ ಭೂಮಿ ಬಹಳ ಫಲವತ್ತಾದುದು. ಇದರಲ್ಲಿ ಹತ್ತಿ, ಗೋಧಿ, ಜೋಳ, ಕುಸುಬೆ, ಶೇಂಗಾ ಇವೆಲ್ಲಾ ಧಾನ್ಯಗಳನ್ನು ಉತ್ತಮವಾಗಿ ಬೆಳೆಯುತ್ತಾರೆ. ಇವುಗಳಿಗೆ ಒಮ್ಮೊಮ್ಮೆ ಬಳೆ ತೆಗೆದ ಅನಂತರ ಮತ್ತ ಮಳೆ ಆಗದೇ ಇರುವುದರಿಂದ ಏನು ಒಳೆ ಬಾರದಲೆ ಪೀಕು ಪೂರ್ಣವಾಗಿ ನಾಶವಾಗುತ್ತಾ ಇದೆ ಎಂದು ಸರ್ಕಾರದವರ ಗಮನಕ್ಕೆ ತರಬಯಸುತ್ತೇನೆ. ಪೆರೆನಿಯಲ್ ಪ್ರಾಜೆಕ್ಟ್ ಈ ಪ್ರದೇಶಕ್ಕೆ ಅವಶ್ಯಕವಾಗಿಲ್ಲ. ಬೆಳೆ ತಯಾರು ಆದ ನಂತರ ಒಂದು ಇಂಚು, ಎರಡು ಇಂಚು ಮಳೆ ಬೇಕು. ಸೀಸನಲ್ ಇರಿಗೇಷನ್ ಸೌಕರ್ಯವನ್ನು ಈ ಪ್ರದೇಶಕ್ಕೆ ಒದಗಿಸಿದರೆ ಈಗ ಏನು ಬೆಳೆ ತೆಗೆದುಕೊಳ್ಳುತ್ತಾ ಇದ್ದೇವೆ ಅದರ ದುಪಟ್ಟು ಪ್ರಮಾಣದಲ್ಲಿ ತೆಗೆದುಕೊಳ್ಳಲಿಕ್ಕೆ ಸಾಧ್ಯವಾಗುತ್ತದೆ ಎಂದು ಖಂಡಿತವಾಗಿಯೂ ಹೇಳ ಬಯಸುತ್ತೇನೆ. ಈ ಭಾಗದಲ್ಲಿ ಬೆಳೆಯತಕ್ಕ ಗೋಧಿ ಇಡಿಯ ಮೈಸೂರು ರಾಜ್ಯಕ್ಕೆ ಪೂರೈಸಲು ಶಕ್ಯವಾಗುತ್ತದೆ ಎಂದು ಧೈರ್ಯವಾಗಿ ಹೇಳಬಯಸುತ್ತೇನೆ. ಪಂಜಾಬಿನಿಂದ ಆಗಲ, ಉತ್ತರ ಪ್ರದೇಶದಿಂದ ಆಗಲಿ ಗೋಧಿ ತರಿಸುವ ಪ್ರಸಂಗ ಬರುವುದಿಲ್ಲ. ಆದುದರಿಂದ ಇದನ್ನು ತೀವ್ರ ತೆಗೆದುಕೊಳ್ಳಬೇಕೆಂದು ಹೇಳುತ್ತಾ ಇದ್ದೇನೆ.

ಇದರ ಮತ್ತೊಂದು ಪರಿಣಾಮವೇನೆಂದರೆ ಸರ್ಕಾರಕ್ಕೆ ಮೇಲಿಂದ ಮೇಲೆ ಹಫ್ತೆ ಮಾಫಿ ಮಾಡುವ ಪ್ರಸಂಗ ಬರುತ್ತದೆ. ಅದನ್ನು ತಪ್ಪಿಸಬೇಕೆಂದರೆ ಈ ಸೀಸನಲ್ ಇರಿಗೇಷನ್ ಸಲುವಾಗಿ ಈ ಯೋಜನೆಯನ್ನು ತೆಗೆದುಕೊಳ್ಳುವುದು ಅಗತ್ಯ. ಕೆರೆ ಕಟ್ಟಿಸಿದರೆ ಮೇಲಿಂದ ಮೇಲೆ ಖರ್ಚು ಮಾಡಬೇಕಾಗುತ್ತದೆ. ಅದನ್ನು ಸಹ ತಪ್ಪಿಸಲಿಕ್ಕೆ ಸಾಧ್ಯವಿದೆ ಎಂದು ಹೇಳಬಯಸುತ್ತೇನೆ. ಅದೂ ಅಲ್ಲದೆ ಕುಡಿಯುವ ನೀರಿನ ವ್ಯವಸ್ಥೆ ಇಲ್ಲದೆ ಎಲ್ಲಿ ಕಷ್ಟ ಇದೆ ಅಂತಹ ಕಡೆ ಮೋಟಾರ್‌ನಲ್ಲಿ ಟ್ಯಾಂಕ್ ಇಟ್ಟು ನೀರು ಪೂರೈಸುವ ಯೋಜನೆ ಇದೆ. ಹೋದಸಾರಿ ಮತ್ತು ಈ ಸಾರಿ ಸಹಿತ ಕೆಲವು ಕಡೆ 10—20 ಸಾವಿರ ರೂಪಾಯಿಗಳನ್ನು ಖರ್ಚು ಮಾಡಿ ಹಳ್ಳಿಗಳಿಗೆ ನೀರು ಪೂರೈಸುತ್ತಾ ಇದ್ದೇವೆ. ಆದರೂ ಸಹಿತ ಹಳ್ಳಿಗಳಿಗೆ ನೀರು ಪೂರೈಸಲು ಸಾಧ್ಯವಾಗುತ್ತಿಲ್ಲ. ಇದನ್ನು ತಪ್ಪಿಸಲಿಕ್ಕೆ ಸಹ ಈ ಯೋಜನೆಯನ್ನು ತೀವ್ರ ಕೈಕೊಂಡರೆ ಸರ್ಕಾರದವರಿಗೆ ದುಡ್ಡಿನ ಉಳಿತಾಯವಾಗುತ್ತದೆ.

ಮತ್ತೊಂದು ಕಷ್ಟ ಎಂದರೆ ಸಹಕಾರ ಸಂಘಗಳಲ್ಲಿ ಸಾಲ ಸಹಿತ ವಸೂಲು ಆಗುವುದು ಕಠಿಣ. ವಸೂಲಾಗದಿದ್ದರೆ ಮುಂದಿನ ಒಕ್ಕಲುತನ ಮಾಡಲಿಕ್ಕೆ ದುರ್ಲಭವಾಗುತ್ತದೆ. ಏಕೆಂದರೆ ಹಿಂದೆಕೊಟ್ಟ ಸಾಲ ತೀರಿಸದಿದ್ದರೆ ಮುಂದಿನ ಸಾಲ ಸಿಕ್ಕದೇ ಹೋಗುತ್ತದೆ. ಆದುದರಿಂದ ಈ ಯೋಜನೆ ಬಹಳ ಮಹತ್ತದ್ದು ಇದೆ. ಇದನ್ನು ಕೈಕೊಳ್ಳಬೇಕೆಂದು ಸರ್ಕಾರದವರಿಗೆ ಮತ್ತೊಮ್ಮೆ ಒತ್ತಾಯ ಪಡಿಸುತ್ತಾ ಇದ್ದೇನೆ.

ಮಾನ್ಯ ಮಿತ್ರರು ಶ್ರೀ ಸಿದ್ಧಾಂತಿಯವರು ಹೇಳಿದ ಪ್ರಕಾರ ಸಾಕಾದಷ್ಟು ನೀರು ಮಲಪ್ರಭಾ ನದಿಯಲ್ಲಿ ಹರಿಯುತ್ತಾ ಇದೆ; ಆದುದರಿಂದ ಆಂಧ್ರ ಸರ್ಕಾರದವರು ಮಾಡುವಂಥ ತಕರಾರಿನಲ್ಲಿ ಯಾವ ಸತ್ಯವೂ ಇಲ್ಲ ಎಂದು ಹೇಳಿದ್ದಾರೆ. ಅದಕ್ಕೆ ನನ್ನ ಸಂಪೂರ್ಣ ಬೆಂಬಲ ಇದೆ. ಅಷ್ಟೇ ಅಲ್ಲ, ಈ ನದಿ ಬೆಳಗಾಂ ಜಿಲ್ಲೆಯಲ್ಲಿ ಹುಟ್ಟಿ ಧಾರವಾಡ ಜಿಲ್ಲೆಯಲ್ಲಿ ಹಾಯ್ದು ಬಿಜಾಪುರ ಜಿಲ್ಲೆಯಲ್ಲಿ ಮುಕ್ತಾಯವಾಗುತ್ತದೆ. ಮತ್ತು ಇದರ ಭಾಗದಲ್ಲಿ ದೊಡ್ಡ ಹಳ್ಳಗಳ ನೀರೂ ಸಹ ಸೇರಿ ಹರಿಯುತ್ತಾ ಇವೆ. ಇಷ್ಟಾದರೂ natural justice ಪ್ರಕಾರ ಈ ನೀರನ್ನು ಈ ಭಾಗದ ಜನರಿಗೆ ಉಪಯೋಗ ಮಾಡಲಿಕ್ಕೆ ಯಾವುದೇ ತರಹ ತಕರಾರು ಬಂದರೂ ಕೂಡ ಅದು ಯೋಗ್ಯವಾದುದಲ್ಲ ಎಂದು ಹೇಳಬಯಸುತ್ತೇನೆ. ಯಾವ ತಕರಾರನ್ನೂ ಮುಂದೆ ಒಡ್ಡದೇ ತೀವ್ರ ಈ ಯೋಜನೆಯನ್ನು ಕೈಕೊಳ್ಳಬೇಕೆಂದು ಹೇಳಬಯಸುತ್ತೇನೆ.

ನನ್ನ ಮಿತ್ರರಾದ ಶ್ರೀಯುತ ಮಲ್ಲಿಕಾರ್ಜುನ ಸ್ವಾಮಿಯವರು, ಈ ಯೋಜನೆಯನ್ನ ಕೈಕೊಂಡರೆ ಇದರ ಸಲುವಾಗಿ ಖರ್ಚುಮಾಡತಕ್ಕ ಯಾವತ್ತು ಹಣ ಕೇಂದ್ರ ಸರ್ಕಾರದಿಂದ ತೆಗೆದುಕೊಳ್ಳಬೇಕೆಂದು ಹೇಳಿದರು. ಸ್ವಾಮಿ, ಇದರಲ್ಲಿ ಏನೂ ನ್ಯಾಯವಲ್ಲ. ಯಾವುದಾದರೂ ಯೋಜನೆಯನ್ನು ಕೈಕೊಂಡರೆ ಕೇಂದ್ರ ಸರ್ಕಾರದವರು ಅವರ share ಕೊಡುವುದು ಮತ್ತು ಸ್ಟೇಟ್ ಗವರ್ನ್‌ಮೆಂಟ್‌ನವರು ಅವರ share ಕೊಡುವುದು ಪದ್ಧತಿ ಇದೆ. ಈ ಕಾರಣ ಮುಂದೆ ಮಾಡದೆ ಯಾವ ಯಾವ ಪ್ರಮಾಣದ ಪ್ರಕಾರ ಕೊಡಬೇಕೆಂಬುದನ್ನು ವಿಚಾರ ಮಾಡಿ ತೀವ್ರ ಈ ಯೋಜನೆಯನ್ನು ಕೈಕೊಳ್ಳಬೇಕಾಗಿ ಸರ್ಕಾರದವರನ್ನು ಒತ್ತಾಯ ಮಾಡುತ್ತಾ ಇದ್ದೇನೆ.

ಸ್ವಾಮಿ, ನನ್ನ ಮಿತ್ರರಾದ ಶ್ರೀ ಸಿದ್ಧಾಂತಿಯವರು ಮತ್ತು ಶ್ರೀ ಜಿ. ಶಿವಪ್ಪನವರು ಈ ಯೋಜನೆಯ ಮಹತ್ವವನ್ನು ತಿಳಿಸಿದ್ದಾರೆ. ನಾನೂ ಸಹ ಸ್ವಲ್ಪ ಹೇಳಬಯಸುತ್ತೇನೆ. ಈ ನವಿಲ ತೀರ್ಥ ಯೋಜನೆಯನ್ನು ಕೈಕೊಂಡದ್ದಾದರೆ ಅದರ catchment area 840 ಮೈಲು ಇದೆ. ನೀರಾವರಿ ಯಾಗತಕ್ಕ ಕ್ಷೇತ್ರ ಮೂರು ಲಕ್ಷ ಎಕರೆಯಷ್ಟು ಆಗುತ್ತದೆ. ಇದರ ಒಂದು ಕಾಲುವೆ 104 ಮೈಲು ಉದ್ದವಾಗುತ್ತದೆ. ಈ ಯೋಜನೆಯಿಂದ ಮೂರು ಲಕ್ಷ ಎಕರೆ ಭೂಮಿಯು ಬಹಳ ಉತ್ತಮವಾಗುತ್ತದೆ. ಈ ಯೋಜನೆಯ ಬಗ್ಗೆ ತಾಂತ್ರಿಕ ಅಭಿಪ್ರಾಯ ಸಹ ಅನುಕೂಲವಾಗಿದೆ. ಆದಕಾರಣ ಈ ಯೋಜನೆಯನ್ನು ಕಾರ್ಯಗತ ಮಾಡುವ ವಿಚಾರದಲ್ಲಿ ಯಾವ ತರದ ನೆಪ ಮುಂದೆ ಮಾಡದೇ ಮತ್ತು ಕೆಲಸವನ್ನು ತಡ ಮಾಡದೆ, ಆದಷ್ಟು ತೀವ್ರವಾಗಿ ಈ ಯೋಜನೆಯು ಕಾರ್ಯಗತವಾಗಬೇಕೆಂದು ಕೇಂದ್ರ ಸರಕಾರದ ಮೇಲೆ ನಮ್ಮ ರಾಜ್ಯ ಸರಕಾರದವರು ಒತ್ತಾಯ ಪಡಿಸಿ, ಇದೇ ವರ್ಷದಲ್ಲಿ ಈ ಯೋಜನೆಯ ಕೆಲಸ ಕಾರ್ಯಗಳನ್ನು ಪ್ರಾರಂಭ ಮಾಡಿ, ಈ ಯೋಜನೆಯ ಮೂಲಕ ಜನರಿಗೆ ಸೌಕರ್ಯಗಳನ್ನು ಒದಗಿಸಿ ಕೊಡಬೇಕೆಂದು ಸರಕಾರಕ್ಕೆ ನಾನು ವಿನಂತಿಮಾಡುತ್ತೇನೆ.

ಶ್ರೀ ಜಿ. ಬಿ. ಶಂಕರರಾವ್ (ಹಿರೇಕೆರೂರ್).—ಮಾನ್ಯ ಸಭಾಧ್ಯಕ್ಷರೇ, ಈಗ ನಮ್ಮ ಮುಂದೆ ಇರುವ ನಿರ್ಣಯವನ್ನು ಸಮರ್ಥಿಸಿ ಮಾತನಾಡುವವನಿದ್ದೇನೆ. ರಾಜ್ಯ ಸರಕಾರವು ಇದೇ ವರ್ಷದಲ್ಲಿ ಈ ಯೋಜನೆಯ ಕೆಲಸವನ್ನು ಪ್ರಾರಂಭಿಸುವುದಕ್ಕೆ ಒತ್ತಾಯ ಪಡಿಸುತ್ತಾ ಈ ಯೋಜನೆಯ ಅಗತ್ಯ ಮತ್ತು ತೀವ್ರ ಕೈಕೊಳ್ಳುವ ಆವಶ್ಯಕತೆಯ ಬಗ್ಗೆ ನಾನು ಮಾತನಾಡುತ್ತೇನೆ. ಈ ನಿರ್ಣಯದಲ್ಲಿರುವ ವಾಕ್ಯಾಂಶ ಹೀಗೆ ಇದೆ. "ನವಿಲ ತೀರ್ಥದಲ್ಲಿ ಮಲಪ್ರಭಾ ಯೋಜನೆಯನ್ನು ಮೂರನೆಯ ಪಂಚವಾರ್ಷಿಕ ಯೋಜನೆಯಲ್ಲಿ ಸೇರಿಸುವುದಕ್ಕೆ ಕಾಯದೆ" ಎಂದು ಈ ನಿರ್ಣಯ ಮಂಡಿಸಿರುವವರು ಸ್ವಲ್ಪ ಯೋಚನೆ ಮಾಡಬೇಕಾಗಿತ್ತು. ಮೂರನೇ ಪಂಚವಾರ್ಷಿಕ ಯೋಜನೆಯಲ್ಲಿ ಸೇರಿಸುವುದಕ್ಕೆ ಕಾಯದೆ ಈ ಯೋಜನೆಯನ್ನು ಕಾರ್ಯರೂಪಕ್ಕೆ ತರಲು ಸರ್ಕಾರದವರು ಕೂಡಲೇ ಕ್ರಮವನ್ನು ಕೈಕೊಳ್ಳಬೇಕೆಂದು ಈ ಸಭೆಯವರು ಅಭಿಪ್ರಾಯಪಡುತ್ತಾರೆ ಎಂದು ನಿರ್ಣಯದಲ್ಲಿ ತಿಳಿಸಲಾಗಿದೆ. ಈಗಾಗಲೇ ನಾವು ಎರಡನೇ ಪಂಚವಾರ್ಷಿಕ ಯೋಜನೆಯ ಕೊನೆಯ ವರ್ಷದಲ್ಲಿದ್ದೇವೆ. ಈ ಎರಡನೆಯ ಪಂಚವಾರ್ಷಿಕ ಯೋಜನೆಯಲ್ಲಿಯೇ ಇದು ಅಡಕವಾಗಿದೆ. ಹೀಗಿರುವಾಗ ಈ ಯೋಜನೆಯನ್ನು ಮೂರನೆಯ ಪಂಚವಾರ್ಷಿಕ ಯೋಜನೆಯಲ್ಲಿ ಸೇರಿಸುವುದಕ್ಕೆ ಕಾಯದೆ ಎಂದು ಹೇಳಿರುವುದು ಅರ್ಥವಾಗುವುದಿಲ್ಲ. ಮೂರನೇಯ ಪಂಚವಾರ್ಷಿಕ ಯೋಜನೆಯಲ್ಲಿ ಇದನ್ನು ಸೇರಿಸಿ ಮೊದಲನೆಯ ವರ್ಷದಲ್ಲಿಯೇ ಇದನ್ನು ಕೈಕೊಳ್ಳಲಾಗುವುದೆಂಬ ಭರವಸೆ ಇದೆ. ಈಗಾಗಲೇ ಈ ಯೋಜನೆಯ ಎಸ್ಟಿಮೇಟು ತಯಾರಾಗಿದೆ. ಸ್ಥಳ ಪರಿಶೀಲನೆಯಾಗಿದೆ. ತಾಂತ್ರಿಕ ಅಭಿಪ್ರಾಯ ಅನುಕೂಲವಾಗಿದೆ. ಇಷ್ಟೆಲ್ಲ ಕೆಲಸ ಕಾರ್ಯಗಳು ನಡೆದು ಎಲ್ಲ ವಿಷಯಗಳಲ್ಲೂ ಅನುಕೂಲ ಅಭಿಪ್ರಾಯವಿರುವಾಗ ಈ ಯೋಜನೆಯ ಕೆಲಸ ಮಾಡದೇ ಇರುವುದಕ್ಕೆ ಸಾಧ್ಯವಿಲ್ಲ. ಆದುದರಿಂದ ಈ ನಿರ್ಣಯದಲ್ಲಿ ಈ ರೀತಿ ಅಭಿಪ್ರಾಯಪಡುವುದು ಅಷ್ಟು ಸರಿಯಾಗಿಲ್ಲ. ಸರಕಾರದವರು ಮನಸ್ಸು ಮಾಡಿದರೆ ಈ ಯೋಜನೆಯ ಕೆಲಸವನ್ನು ಈಗಲೇ ಪ್ರಾರಂಭಿಸಬಹುದು. ಶ್ರೀಮಾನ್ ಚನ್ನಬಸಪ್ಪನವರು ಶರಾವತಿ ಯೋಜನೆಯನ್ನು ಕಾರ್ಯಗತ ಮಾಡುವುದರಲ್ಲಿ ವಿಶೇಷ ಉತ್ಸಾಹವನ್ನು ತೋರಿಸುತ್ತಿದ್ದಾರೆ. ಅದರಲ್ಲಿ ಅವರಿಗೆ ಬಹಳ ಆಸಕ್ತಿಯಿದೆ. ಸಂಪೂರ್ಣವಾಗಿ ರತಕ್ಕ ಯೋಜನೆಯನ್ನು ಕಾರ್ಯಗತಮಾಡಲು ಅವರಿಗೆ ಆಸಕ್ತಿ ಉತ್ಸಾಹಗಳು ವಿಶೇಷವಾಗಿವೆ. ಅದೇ ರೀತಿಯಾಗಿ ಈ ಯೋಜನೆಯ ವಿಷಯದಲ್ಲೂ ಅವರು ಅಷ್ಟೇ ಆಸಕ್ತಿ ಉತ್ಸಾಹಗಳನ್ನು ತೋರಿಸುತ್ತಾರೆಂದು ಜನರು ನಿರೀಕ್ಷಿಸುತ್ತಿದ್ದಾರೆ. ನಮ್ಮ ದೇಶದಲ್ಲಿ ಹಿಂದಕ್ಕೆ ಜಕಣಾಚಾರ್ಯರಂತಹ ಪ್ರಸಿದ್ಧ ಶಿಲ್ಪಿಗಳು ಆಗಿ ಹೋಗಿದ್ದಾರೆ. ಶ್ರೀಮಾನ್ ಚನ್ನಬಸಪ್ಪನವರು ಈ ಲೋಕೋಪಯೋಗಿ ಇಲಾಖೆಯನ್ನು ವಹಿಸಿಕೊಂಡ ಅನಂತರ ಅವರು ಮಾಡುತ್ತಿರುವ ಕಾರ್ಯಗಳನ್ನು ನೋಡಿದರೆ ಅವರು ಅಭಿನವ ಜಕಣಾಚಾರ್ಯರಾಗಿದ್ದಾರೆಂದು ಅನ್ನಬಹುದು. ಅಷ್ಟು ಆಸ್ಥೆಯಿಂದ ಒಳ್ಳೆಯ ಮತ್ತು ದೊಡ್ಡ ದೊಡ್ಡ ಯೋಜನೆಯ ಕೆಲಸಗಳನ್ನು ತ್ವರಿತವಾಗಿ ಮಾಡುತ್ತಿದ್ದಾರೆ. ಶ್ರೀಮಾನ್ ಚನ್ನಬಸಪ್ಪನವರಿಗೆ ನಾನು ಒಂದು ವಿನಂತಿಮಾಡಿಕೊಳ್ಳುತ್ತೇನೆ: ಇಷ್ಟೊಂದು ಸಮರ್ಥ ರೀತಿಯಲ್ಲಿ ಇಂಥ ದೊಡ್ಡ ದೊಡ್ಡ ಯೋಜನೆಗಳನ್ನು ಕೈಕೊಂಡು ಕಾರ್ಯಗತಮಾಡತಕ್ಕಂಥ ಸಾಮರ್ಥ್ಯ ಅವರಲ್ಲಿ ಇರುವಾಗ ಈ ನವಿಲುತೀರ್ಥಯೋಜನೆಯಂಥ ಸಣ್ಣಯೋಜನೆಯನ್ನು ಕಾರ್ಯಗತಮಾಡಲು ಅವರಿಗೇನೂ ಅದು ಅಸಾಧ್ಯವಲ್ಲ. ಆದುದರಿಂದ ಈ ಯೋಜನೆಯ ಕೆಲಸವನ್ನು ತೀವ್ರಕೈಕೊಂಡು ಕಾರ್ಯಗತಮಾಡಬೇಕಾಗಿ ನಾನು ಅವರಿಗೆ ಪ್ರಾರ್ಥಿಸುತ್ತೇನೆ. ಈ ವರ್ಷದಲ್ಲಿಯೇ ಈ ಯೋಜನೆಯನ್ನು ಪ್ರಾರಂಭಮಾಡಿದರೆ ಇದರ ಪ್ರಯೋಜನ ಜನರಿಗೆ ತೀವ್ರವಾಗಿ ಸಾರ್ಥಕವಾಗುತ್ತದೆ ಎಂದು ನನ್ನ ಅಭಿಪ್ರಾಯ. ಈ ಯೋಜನೆಯ ಯಶಸ್ವಿಯಾಗುವ ಬಗ್ಗೆ ಹೇಳುವುದಕ್ಕಾಗಿ ಅಂಕಿಅಂಶಗಳನ್ನು ಪುನಃ ಪ್ರಸ್ತಾಪಿಸಿ ಹೇಳುವುದಿಲ್ಲ. ಸದಸ್ಯರನೇಕರು ಈ ಮೊದಲೇ ಇದನ್ನೆಲ್ಲ ಹೇಳಿದ್ದಾರೆ. ಈ ಯೋಜನೆಯ catchment area ಎಷ್ಟು, ಕಾಲುವೆ ಎಷ್ಟು ಉದ್ದ ಆಗುತ್ತದೆ, ಅಣೆಕಟ್ಟು ಎಲ್ಲಿ ಹಾಕುವುದು, ಖರ್ಚು ಎಷ್ಟು ಆಗುವುದು, ನೀರಾವರಿ ಅಗತಕ್ಕ ಕ್ಷೇತ್ರ ಎಷ್ಟು ಮುಂತಾದ ಎಲ್ಲ ವಿವರಗಳನ್ನೂ ಮಾನ್ಯ ಸದಸ್ಯರು ಈ ಮೊದಲೇ ಹೇಳಿದ್ದಾರೆ. ಒಟ್ಟಿನಲ್ಲಿ ಈ ಯೋಜನೆಯನ್ನು ಈ ವರ್ಷದಲ್ಲಿ ಪ್ರಾರಂಭಿಸಿ ಕಾರ್ಯಗತ ಮಾಡಬೇಕೆಂದು ನಾನು ಹೇಳಬಯಸುತ್ತೇನೆ. ಈ ಯೋಜನೆಯನ್ನು ಕಾರ್ಯಗತ ಮಾಡುವುದರಲ್ಲಿ ಸರಕಾರಕ್ಕೆ ಯಾವ ತೊಂದರೆಯಾಗುವುದಿಲ್ಲ. ಈ ನದಿಯ ಯೋಜನೆ ಆದನಂತರ ಆ ಭಾಗದಲ್ಲಿಯ ಜನಗಳಿಗೆ ವರುಷ ವರುಷಕ್ಕೆ ಆಗುತ್ತಿರುವ ಬರಗಾಲ ಪೀಡೆಯು ನಿವಾರಣೆಯಾಗುತ್ತದೆ. ಬಹು ಕಾಲದಿಂದ ಬರಗಾಲ ಪೀಡಿತ ಪ್ರದೇಶವಾಗಿರುವುದರಿಂದ ಜನರು ಈ ಯೋಜನೆಯ ನಿರೀಕ್ಷಣೆ ಮಾಡುತ್ತಿದ್ದಾರೆ. ಬರಗಾಲದಿಂದ ಅಲ್ಲಿಯ ಜನರಿಗೆ ಅಹಾರದ ಅಭಾವವಿದೆ.

ಜನರು ಆ ಭಾಗದಿಂದ ಗುಳೆ ಕಟ್ಟಿಕೊಂಡು ಬೇರೆ ಕಡೆಗೆ ಹೋಗಿ ವರ್ಷದ ಕೆಲವೊಂದು ಭಾಗದಲ್ಲಾದರೂ ಜೀವನೋಪಾಯವನ್ನು ಕಲ್ಪಿಸಿಕೊಂಡಿರುವ ನಿದರ್ಶನಗಳಿವೆ. ಅಲ್ಲಿ ಕೂಲಿಗಾರರು ಸಿಕ್ಕುವುದಿಲ್ಲ. ಅವರ ಅಭಾವವಿದೆ ಎಂದು ಈ ಯೋಜನೆಯನ್ನು ಮುಂದುವರಿಸಲು ಕಾರಣವಿಲ್ಲ. ಮೇಲಾಗಿ ಈ ಯೋಜನೆಯನ್ನು ಕಾರ್ಯಗತ ಮಾಡುವುದರಿಂದ ಎರಡು ಬಲವಾದ ಉದ್ದೇಶಗಳು ಸಫಲವಾಗುತ್ತವೆ ಎಂಬುದು ನನ್ನ ಅಭಿಪ್ರಾಯ. ಇದು ಅತ್ಯುತ್ತಮವಾದುದು. ಇದನ್ನು ಕಾರ್ಯಗತಮಾಡಿದರೆ ಬರಗಾಲ ಪೀಡಿತವಾದ ನವಲಗುಂದ, ನರಗುಂದ ಮತ್ತು ಸೌಂದತ್ತಿ ಭಾಗಗಳಿಗೆ ಅನುಕೂಲವಾಗಿ ಅಲ್ಲಿ ಬರಗಾಲದ ತೊಂದರೆ ತಪ್ಪಿ ಹೋಗುತ್ತದೆ. ಅದೂ ಅಲ್ಲದೆ ಉದ್ಯೋಗದ ಅಭಾವವೂ ತಪ್ಪುತ್ತದೆ. ಸರ್ಕಾರದವರು ಸ್ಕೇರ್ಸಿಟಿ ಕಂಡೀಷನ್ ಇರುವ ಈ ಭಾಗದಲ್ಲಿ ಪ್ರತಿವರ್ಷ ಫ್ಯಾಮಿನ್ ರಿಲೀಫ್ ಫಂಡ್ ಎಂದು ಕ್ಷಾಮ ಪೀಡಿತ ಭಾಗಗಳಲ್ಲಿ ವರ್ಷೇ ವರ್ಷೇ ಖರ್ಚು ಮಾಡುವುದೂ ಸಹ ತಪ್ಪುತ್ತದೆ. ಇಷ್ಟೇ ಅಲ್ಲ. ಈ ಭಾಗದಲ್ಲಿ ಫಲವತ್ತಾದ ಭೂಮಿಯಿರುವುದರಿಂದ ಅಲ್ಲಿ ದೇಶಕ್ಕೆ ಬೇಕಾದ ಆಹಾರ ಧಾನ್ಯ ಬೆಳೆದು ಒದಗಿಸಬಹುದು, ಜನರ ಆರ್ಥಿಕ ಪರಿಸ್ಥಿತಿಯೂ ಉತ್ತಮಗೊಳ್ಳುತ್ತದೆ. ಹೀಗೆ ಈ ಯೋಜನೆಯಿಂದ ಸರ್ಕಾರದ ಉದ್ದೇಶ ಎರಡು ರೀತಿಯಿಂದ ಪೂರ್ಣವಾಗುತ್ತದೆ. ಇಂಥ ದೊಡ್ಡ ದೊಡ್ಡ ಯೋಜನೆಗಳನ್ನು ಸರ್ಕಾರದವರು ತಾವಾಗಿಯೇ ಕೈಕೊಂಡರೆ ಅಥವಾ ಜನರ ಬೇಡಿಕೆಯ ಮೇಲೆ ಕೈಕೊಂಡರೆ ಒಂದು ದೃಷ್ಟಿಯಿಂದ ಮುಗಿಯುವುದರಲ್ಲಿ ಸ್ವಲ್ಪ ಅನುಮಾನವಾಗುತ್ತದೆ. ಏಕೆಂದರೆ ಮೊದಲೇ ಹೇಳಿದಂತೆ ಕೂಲಿಗಾರರು ಸಿಕ್ಕುವುದಿಲ್ಲವೆಂಬ ಕಾರಣದಿಂದ ಮುಂದುವರಿಯಬಹುದು. ಆ ಪರಿಸ್ಥಿತಿ ಈ ಯೋಜನೆ ಕೈಕೊಳ್ಳುವ

ಜಾಗದಲ್ಲಿಲ್ಲ. ಅಲ್ಲಿ ಜನರು ತಾವಾಗಿಯೇ ಮುಂದೆ ಬಂದು ಇಂಥ ಒಂದು ಯೋಜನೆ ಉತ್ಕೃಷ್ಟವಾಗಿದೆ, ಸರ್ಕಾರದವರು ನಿರಾಯಾಸವಾಗಿ, ನಿರಾತಂಕವಾಗಿ ಕೆಲಸ ನಡೆಸಬಹುದು, ಎಂದು ಹೇಳಿ ತಾವೇ ಬಂದು ಕೆಲಸ ಮಾಡುವುದಕ್ಕೆ ತಯಾರಾಗಿದ್ದಾರೆ. ಈ ಅಭಿಪ್ರಾಯವನ್ನು ಇಲ್ಲಿ ಸದಸ್ಯರು ತಿಳಿಸಿರುವುದಲ್ಲದೆ ದೇಶದ ಮುಖಂಡರ ಮುಂದೆಯೂ ಸಹ ಅಲ್ಲಿನ ಜನರು ಈ ಬೇಡಿಕೆಯನ್ನು, ಇದರ ಬಗ್ಗೆ ತಮ್ಮ ತೀವ್ರವಾದ ಇಚ್ಛೆಯನ್ನು ಸೂಚಿಸಿ ಅವರಿಗೆ ಮನವರಿಕೆ ಮಾಡಿಕೊಟ್ಟಿದ್ದಾರೆ. ಆದುದರಿಂದ ಅಲ್ಲಿ ಈ ಯೋಜನೆಯ ಕೆಲಸ ಪ್ರಾರಂಭವಾದ ಮೇಲೆ ವಿಳಂಬ ಆಗಲಿಕ್ಕಿಲ್ಲ. ಬಹಳ ತೀವ್ರವಾಗಿ ಜನರು ಈ ಯೋಜನೆಯ ಲಾಭ ಪಡೆಯಲು ಆಸಕ್ತರಾಗಿದ್ದಾರೆ. ಇದರಿಂದ ದೇಶದ ಕ್ಷಾಮ ಪೀಡಿತ ಭಾಗದ ಕೊರತೆಯನ್ನು ನೀಗುವುದಕ್ಕೆ ಸಾಧ್ಯವಾಗುತ್ತದೆ.

ಕೆಲವು ಮಾನ್ಯ ಸದಸ್ಯರು ಕೃಷ್ಣಾನದಿಗೆ ಸೇರುವ ನೀರು ಕಡಮೆಯಾಗಿ ಅಲ್ಲಿನ ನದಿಯ ನೀರು ನಮ್ಮ ದೇಶದಿಂದ ಹೊರಗೆ ಹೋಗುವುದರಿಂದ ತೊಡಕುಂಟಾಗಬಹುದೆಂದು ಸರ್ಕಾರ ಈ ಯೋಜನೆಯನ್ನು ಮುಂದುವರಿಸಬಹುದೆಂಬ ಸಂಶಯವನ್ನು ವ್ಯಕ್ತಪಡಿಸಿದ್ದಾರೆ. ಆದರೆ ಈಗ ಆ ತೊಂದರೆ ಬರಲಿಕ್ಕಿಲ್ಲ. ಉತ್ತರ ಕರ್ಣಾಟಕದ ಭಾಗದಲ್ಲಿ ಮಲಪ್ರಭಾ ಕೃಷ್ಣಾ, ಭೀಮಾ, ಘಟಪ್ರಭಾ, ತುಂಗಭದ್ರಾ ಇವುಗಳ ಕೆಲವು ಭಾಗ ನೀರು ನಮ್ಮ ಕರ್ಣಾಟಕ ದೇಶದಲ್ಲಿ ಉಪಯೋಗವಾಗದೆ ವ್ಯರ್ಥವಾಗಿ ಸಮುದ್ರಕ್ಕೆ ಹೋಗಿ ಸೇರುತ್ತಿದೆ. ಅದನ್ನು ಉಪಯೋಗಿಸಿಕೊಳ್ಳಲು ಈಗಲೇ ಕ್ರಮವನ್ನು ಕೈಕೊಂಡರೆ ನಮ್ಮ ದೇಶಕ್ಕೆ ಹೆಚ್ಚು ಉಪಯೋಗವಾಗುತ್ತದೆ. ಬೇರೆಪ್ರಾಂತದವರು ಈ ನದಿಗಳ ನೀರನ್ನು ಉಪಯೋಗಿಸಲು ಪ್ರಯತ್ನ ಮಾಡಿದ ಮೇಲೆ ನಾವು ಪ್ರಯತ್ನ ಪಟ್ಟರೆ ಮುಂದೆ ಸಾಕಷ್ಟು ನೀರನ್ನು ಉಪಯೋಗಮಾಡಿಕೊಳ್ಳಲು ತೊಂದರೆ ಬರಬಹುದು. ಆದುದರಿಂದ ತೀವ್ರವಾಗಿ ಈ ಯೋಜನೆಯನ್ನು ತೆಗೆದುಕೊಳ್ಳಬೇಕು. ಈ ಯೋಜನೆ ತಾಂತ್ರಿಕ ಅಭಿಪ್ರಾಯದಂತೆ ಕಡಮೆ ಖರ್ಚಿನಲ್ಲಿ ಆಗಲು ಸಾಧ್ಯವಿದೆ. ಆದುದರಿಂದ ಮೀನ ಮೇಷ ಎಣಿಸದೆ ತೀವ್ರವಾಗಿ ಕೈಕೊಳ್ಳಬೇಕು. ಕೇವಲ 20—22 ಕೋಟಿ ರೂಪಾಯಿಗಳಲ್ಲಿ ಆಗಬಹುದು. ಶರಾವತಿ ಯೋಜನೆಯಂತೆ ಹೆಚ್ಚು ಖರ್ಚಾಗತಕ್ಕದ್ದಲ್ಲ. ಅದರ ಕಾಲುಭಾಗ ಹಣ ಖರ್ಚುಮಾಡಿದರೆ ಸಾಕಾಗಬಹುದು. ಆದುದರಿಂದ ಹೆಚ್ಚುಕಾಲ ತೆಗೆದುಕೊಳ್ಳದೆ ಈ ಕೆಲಸ ಮಾಡಿ ಸರ್ಕಾರ ಈ ಕೆಲಸ ತಾವೇ ಮಾಡಿದ ಶ್ರೇಯಸ್ಸಿಗೆ ಪಾತ್ರರಾಗಿ ಜನರಿಂದ ಮನ್ನಣೆ ಪಡೆಯಬೇಕು.

ಶ್ರೀ ಮಲ್ಲಿಕಾರ್ಜುನ ಸ್ವಾಮಿಯವರು ಈ ಯೋಜನೆಯ ಪೂರ್ತಿ ಖರ್ಚನ್ನು ರಾಜ್ಯ ಸರ್ಕಾರದವರೇ ವಹಿಸಬೇಕು, ಪಂಚವಾರ್ಷಿಕ ಯೋಜನೆಯಲ್ಲಿ ಅಡಕವಾಗದಿದ್ದರೆ ಕೇಂದ್ರ ಸರ್ಕಾರದ ಹಣ ಉಪಯೋಗಿಸುವಂತಿಲ್ಲ ಎಂದು ಹೇಳಿದಂತೆ ಕಂಡು ಬಂತು.

Sri M. MALLIKARJUNA SWAMY (Malavalli).—He is not correct, Sir.

4 P.M.

Sri G. B. SHANKAR RAO.—According to what has been reported in the press, I understand he has stated that the whole cost of this project should be met by the State Government.

ಸಭಾಧ್ಯಕ್ಷರೇ, ಈ ಯೋಜನೆ ಮೂರನೆಯ ಪಂಚವಾರ್ಷಿಕ ಯೋಜನೆಯಲ್ಲಿ ಅಡಕವಾಗಿದೆ ಎಂದು ಹೇಳಿದ್ದಾರೆ. ಎರಡನೆಯ ಪಂಚವಾರ್ಷಿಕ ಯೋಜನೆಯಲ್ಲಿ ಇದ್ದುದನ್ನು ಮೂರನೆಯ ಯೋಜನೆಗೆ ಹಾಕಿದ್ದಾರೆ. ಮೂರನೆಯ ಯೋಜನೆಯಲ್ಲಿ ಆಗುತ್ತದೆ ಎನ್ನುವ ವಿಶ್ವಾಸವಿಲ್ಲ. ಮೂರನೆಯ ಯೋಜನೆಯಲ್ಲಿ ತೆಗೆದು ಕೊಳ್ಳುತ್ತೇವೆಂದರೆ ಅದರ ಮೊದಲನೆಯ ವರ್ಷ ಪ್ರಾರಂಭಮಾಡಬಹುದು. ಅಥವಾ ಕೊನೆಯ ವರ್ಷ ಪ್ರಾರಂಭ ಮಾಡಬಹುದು. ಆದುದರಿಂದ ಎರಡನೆಯ ಯೋಜನೆಯಿಂದ ಮೂರನೆಯ ಯೋಜನೆಗೆ ತಳ್ಳಿದ್ದು ಒಳ್ಳೆಯದಲ್ಲ. ಉಳಿದ ಯೋಜನೆಗಳಿಗೆ ಸರ್ಕಾರದವರು ಎಷ್ಟು ಆಸ್ಥೆ ಮತ್ತು ಆಸಕ್ತಿಯನ್ನು ತೋರಿಸಿ ಅವುಗಳನ್ನು ತೀವ್ರವಾಗಿ ಪ್ರಾರಂಭಿಸುತ್ತಾರೆಯೋ, ಶರಾವತಿ ಯೋಜನೆಯನ್ನೂ ಯಾವ ರೀತಿ ಪ್ರಾರಂಭಮಾಡಿದ್ದಾರೆಯೋ ಅದೇ ರೀತಿ ಈ ಯೋಜನೆಯನ್ನು ಸಹ ಇದೇ ವರ್ಷವೇ ಪ್ರಾರಂಭ ಮಾಡಬೇಕೆಂದು ಹೇಳಿ, ಮಾನ್ಯ ಸದಸ್ಯರು ತಂದಂಥ ನಿರ್ಣಯಕ್ಕೆ ನನ್ನ ಸಂಪೂರ್ಣವಾದ ಒಪ್ಪಿಗೆಯನ್ನು ಸೂಚಿಸಿ ನನ್ನ ಮಾತನ್ನು ಮುಗಿಸುತ್ತೇನೆ.

Sri B. VAIKUNTA BALIGA (Mangalore—I).—Mr. Speaker, I wholeheartedly......

Sri C. J. MUCKANNAPPA.—Sir, this House discussed this subject while speaking on the Governor's Address, general discussion and there was an half hour discussion. Is it so important so as to spend the whole day to discuss this again ?

ಅಧ್ಯಕ್ಷರು.—ಹಾಗೆ ಹೇಳಿದರೆ ಏನು ಅರ್ಥವಾಗುತ್ತದೆ? ತಾವು closure motion ಸೂಚಿಸುವ ಹಾಗಿದ್ದರೆ ಮಾಡಬಹುದು.

Sri B. VAIKUNTA BALIGA.—I am grateful to Sri C. J. Muckannappa for expressing the idea that he does not want to incur my displeasure. But by interrupting me he has done that and I cannot think of excusing him. Therefore hereafter I will make a permanent request to him that he should not disturb me when I am speaking. I do not agree also with Sri C. J. Muckannappa that the subject is not of adequate importance. That it is not necessary to discuss further is absolutely incorrect. With acute shortage of foodstuffs and remembering that huge sums amounting to crores of rupees have been spent on importing foodstuffs from outside, I feel that this is a very very important subject. This is such a subject though it has been discussed many times, it will still be focussed for study and implementation. It has to be remembered that the fact that is present in

(SRI B. VAIKUNTA BALIGA)

the resolution is not the one that was discussed either in the course of discussion of the Governor's Address or at any other time. The scheme relates to the process of preventing recurring famine conditions and multiple advantages that arise out of the scheme. Having said this much, I will not refer to the disturbance that was here.

In all the civilised countries where progress is achieved maximum use of water is made everywhere. It is said that Colarado has been harnessed ten times before it reaches the sea. That is why that part of the country is very prosperous. God has given us water for making the best use of it and for reasons beyond our control it is impossible to harness these rivers. I should like to say that is something, the stigma of which we should try to wipe out. One incident which happened in London eight years ago was that when the audience was told that only 5 % of the monsoon water of the south-west monsoon was used and 95 per cent was allowed to run to waste, it simply shocked the people and they wanted to know whether there was any plan on earth to harness it. Any scheme that produces food has to be given top priority So far as this scheme is concerned, it is stated that it has not been included in the Third Plan or may not be included and nothing is known as to when it has exactly to be taken up. It is exactly to focus the attention and bring to the notice of this House as well as the State Government and the Central Government that the resolutions has been moved. Whether it has to be considered on top priority basis or not, has to be decided. Judging from the actual data and the possibilities of raising food production and the utility that are arising out of this cheme, I am sure the House will accept this resolution. It is stated that Mysore State receives the largest amount of water from Heaven than any other State. No other State receives more water than our State. Similarly if we apply any other test to see any State which uses proportionate quantity of water received, Mysore is placed very low. Apart from this it is also admitted that this area is a scarcity area. It has always been known in the past that whenever there is irregular monsoon, famine visits the place and many people suffer. Even if there is plently of food just to see that there is no famine I should say that this resolution should be accepted. It is not a question of having aggregate food for the whole nation in the total output of all the States put together. Famine is a thing which will not only result in loss of the crop and the loss of income, but the part it plays has to be considered. An area which is subject to famile, takes generations before it comes to normal. So irrespective of the cost of the project, it should be considered. Fortunately judged by this test also, it is stated that it is not so prohibitive. Before I deal with the cost of the project I should like to say that there is a rich black cotton soil. The soil has not been exploited till now. This factor of rich soil is a good point in favour of acceptance of the scheme. So far as cost is concerned, I have got a note with regard to the scheme. Normally it would be worth Rs. 1,500 per acre but here it costs Rs. 506 per acre. How far it is correct, I am not certain but I have no reason to doubt it. If anybody doubts, let him examine it Apart from using the soil which is so rich we will be able to have several advantages in the way of having employment. When unemployment is so acute and people are complaining, when there is such a scheme it has its own advantages. I was rather happy to hear persons saying that whether it was necessary to have the wheat from Punjab when we could produce ourselves here. The idea of producing wheat to cater to the people of the locality is good but the place of production is a vital factor. It may be easy for us to get wheat or rice from other countries. It is also easy to say that the wheat can be purchased from Punjab and brought here. But the idea and possibility and achieve ment of producing wheat in this area in our State is something of which we should be legitimately proud and

happy. Sir, when wheat is produced in the Punjab, it does not come by itself. Incidental cost of transport which could be saved is a load which is ultimately put upon the people of the locality. The cost price cannot be minimised; the Government cannot be willing or able to subsidise it. The Centre may not give help. Even if all these aspects are to be brushed aside, what should be brought into focus is whether the conveyance of wheat from the Punjab to here, whether the haulage or overhead cost can be eliminated. We are having so many advantages and there is absolutely no doubt that the scheme is worthy of acceptance by this House. Sir, the quality of wheat, I am told, is absolutely good. Even otherwise the quality of wheat and an improvement on that, a little research and a little painstaking will bring about the desired result. The question is whether they have to sit quiet. This is, no doubt, a good scheme. It is one worthy of acceptance. It may take a little time. But should we go on with the idea that there is no agreement with regard to the distribution of the water of the Krishna River or should any other idea be linked up with this scheme, namely, the expenses of the scheme and the presentation? Sir, with regard to the question of distribution of water after all we must remember, when the river flows through this State like any other, the basic idea is that every person or citizen of the State in which that river flows is entitled to use it, is expected to use it and if we want prosperity, is bound to use it. The question is as to how far this interferes with the rights of other States. But may I say the other States receive the surplus unless we have bound ourselves by saying that the water is to be used in definite proportion with regard to the States through which this river, its entire length, flows. I feel, really there is no legal impediment. Having regard to the national importance, the one point which ought to weigh very much is, the relative importance as to whether the ultimate use of the water in the various States and how it will reflect upon the entire fabric of the economy of the country will be the only criterion. If it is shown that another State can use it for much better purpose in the over-all picture and it is better to allow that State to use it rather than our State, that may be a point which may be considered. While so judging, I would certainly like the Government to bear in mind that it is not so much the item of cost alone that should be considered or the total production, but we have to weigh in the over-all picture the employment potential as I have already said, the wages and other expenses that will be ploughed into this State for the benefit of the people of the State and also the cost that will be incurred in transport and the utility of these things have to be considered. It is not a question of simply saying wheat is available there and if it is produced here, the cost of production will be much more. It is in that light I am saying that in a complicated matter like this, one facet should not be taken as an all-pervading consideration or as one which is outweighing all other considerations. What is the object of the resolution? The object of the resolution is to show and reflect the feeling of the House, the opinion of the House, the keen desire of the House. It is in that light that I am saying; though I do not come from that area, I am as much interested in the entire State as anybody else. It is in that light I have looked into the details of the scheme and I have absolutely no hesitation in saying that the scheme is worthy of acceptance and it is absolutely quite good and that it should be accepted. Sir, the question of finding finance I will not fail to refer to now. The finance may be available today or it may not be available for one year.

It may not be possible for us to say that it should be implemented immediately. First of all, let us reach the state of saying that it is worthy of acceptance and with all the force at our command we must urge the Central Government to implement it. Then comes the question of finance. With regard to finance, it is well known that these schemes do not mean that the entire money should be made available

(SRI B. VAIKUNTA BALIGA)

at the beginning or it should be spent in the first year itself. It will be spread over for a fairly long period. It cannot be said that it will not be possible to find money at all. Finances should not be allowed to come in the way of consideration of this scheme, and it should not be rejected on that account. Sir, so far as the State is concerned, I do not think that the State can say that it is not in a position to begin work; It can begin the work on the distinct understanding that the Centre to the extent that it is expected can be persuaded to give money at a later stage. The idea is to start a scheme, implement it and set it in motion and then receive whatever contribution or whatever help that is to be and that may be accounted for and adjusted at a later date. Can we not have enough credit to see that we will advance the contribution that the Centre will ultimately disburse and wipe out the debt? In view of the advantages that we will be deriving from that scheme, we must consider whether the non-availability of money should make us hesitate to accept the scheme. In view of various aspects of utility, I should feel that this scheme should be accepted; though I have not in my hand facts and figures with regard to the area that should be submerged, with regard to the number of houses that will be affected and the number of people that have to be settled elsewhere, they are things which have to be scrutinised and if it is necessary they can be further scrutinised, but in basic principles, I have no hesitation in commending the resolution for the acceptance of the House unanimously and without any division. Thank you.

* ಶ್ರೀ ಎಚ್. ಎಂ. ಚನ್ನಬಸಪ್ಪ (ಲೋಕೋಪಯೋಗಿ ಮತ್ತು ವಿದ್ಯುಚ್ಛಕ್ತಿ ಶಾಖೆಯ ಮಂತ್ರಿಗಳು).—ಸ್ವಾಮಿ, ಮಲಪ್ರಭಾ ನೀರಾವರಿ ಯೋಜನೆಯನ್ನು ತೀವ್ರತೆಯಿಂದ ಕಾರ್ಯರೂಪಕ್ಕೆ ತರಬೇಕು ಎನ್ನತಕ್ಕಂಥ ವಿಚಾರದಲ್ಲಿ ಬಹುಶಃ ನಿನ್ನೆಯ ದಿವಸ ಮತ್ತು ಇವೊತ್ತು ಇಷ್ಟು ಕಾಲ, ಇಷ್ಟೊಂದು ಜನ ಮಾನ್ಯ ಸದಸ್ಯರು, ಇಷ್ಟು ಒತ್ತಾಯಪೂರ್ವಕವಾಗಿ ಹೇಳತಕ್ಕಂಥ ಆವಶ್ಯಕತೆ ಇಲ್ಲ, ಎನ್ನುವ ವಿಷಯವನ್ನು ನಾನು ಮೊಟ್ಟಮೊದಲು ಈ ಸಭೆಗೆ ತಿಳಿಸಬೇಕು ಎನ್ನುವುದು ನನ್ನ ಆಶೆ. ಮತ್ತು ಏತಕ್ಕೋಸ್ಕರ ಅದು ನಿಧಾನವಾಗುತ್ತಿದೆ, ಯಾವಾಗ ಕಾರ್ಯಕ್ರಮವನ್ನು ತೆಗೆದುಕೊಳ್ಳುತ್ತಾರೆ, ಇತ್ಯಾದಿ ವಿವರಗಳ ಬಗ್ಗೆ ಮಾನ್ಯ ಸದಸ್ಯರುಗಳು ವಿಷಯಗಳನ್ನು ತಿಳಿಯಲು ಕುತೂಹಲರಾಗಿರಬಹುದು. ಮಲಪ್ರಭಾ ಯೋಜನೆಯು ಅತಿ ಶೀಘ್ರದಲ್ಲಿ ಕಾರ್ಯ ಆರಂಭವಾಗಿ ಅದನ್ನು ಶೀಘ್ರವಾಗಿ ಪೂರೈಸಿ ಅದರ ಪ್ರಯೋಜನವನ್ನು ಬಿಜಾಪುರ, ಧಾರವಾಡ ಮತ್ತು ಬೆಳಗಾಂ ಜಿಲ್ಲೆಗಳಲ್ಲಿರತಕ್ಕ ಅಭಾವ ಪ್ರದೇಶಗಳಿಗೆ ಒದಗಿಸಬೇಕು ಎನ್ನುವ ವಿಷಯದಲ್ಲಿ ಈಗ ಮಾನ್ಯ ಸದಸ್ಯರು ಎಷ್ಟು ತೀವ್ರತೆಯನ್ನು ವ್ಯಕ್ತಪಡಿಸಿದರೋ ಅದಕ್ಕಿಂತಲೂ ಹೆಚ್ಚಿನ ತೀವ್ರತೆ ಸರ್ಕಾರಕ್ಕೆ ಇದೆ ಎನ್ನುವ ವಿಷಯವನ್ನು ಅನುಮಾನಕ್ಕೆ ಎಡೆ ಇಲ್ಲದಂತೆ ತಿಳಿಸಬೇಕು ಎನ್ನುವುದು ನನ್ನ ಆಶೆ. ಮಲಪ್ರಭಾ ನೀರನ್ನು ಈ ಪ್ರಾಂತಗಳಿಗೆ ಉಪಯೋಗ ಮಾಡಬೇಕು ಎಂದು ಯೋಜನೆ ಮಾಡಿ 100 ವರ್ಷಗಳಾದುವು.

ಆದರೆ, ಬಹಳ ಕಾಲದವರೆಗೆ ಇದು ಯೋಜನೆಯೊಳಗೇ ಉಳಿದಿತ್ತು. ಸ್ಟೇಟು ರೀಆರ್ಗನೈಸೇಷನ್ನು ಆಗುವ ಮುನ್ನ ಬೊಂಬಾಯಿ ಸರ್ಕಾರದವರು ಪ್ರಿಲಿಮಿನರಿ ಇನ್ವೆಸ್ಟಿಗೇಷನ್ನು ಎಂದು ಏನು ಹೇಳುತ್ತಾರೆ, ಅಂತಹ ಪ್ರಾರಂಭಿಕ ಪರಿಶೀಲನೆಗಳನ್ನು ನಡೆಯಿಸಿ ಈ ನೀರನ್ನು ಉಪಯೋಗ ಮಾಡಿಕೊಳ್ಳಬೇಕು ಎಂದು ಅಭಿಪ್ರಾಯಪಟ್ಟು ಇದನ್ನು ಕಾರ್ಯರೂಪಕ್ಕೆ ತರಲು ಪ್ರಯತ್ನ ಮಾಡಲಾಗಿತ್ತು. ಆಗ್ಗೆ ಪ್ರಿಲಿಮಿನರಿ ಇನ್ವೆಸ್ಟಿಗೇಷನ್ನು ಮಾಡುವ ಕಾಲದಲ್ಲಿ ಅಸೋಗಾ ಬುರೇದವಾಡ ಅಥವಾ ಮಸೋಲಿ, ಇವು ಮೂರು ಕಡೆಗಳಲ್ಲಿ ಯಾವುದನ್ನು ಮಾಡಬೇಕು ಎಂಬ ಬಗ್ಗೆ ಅವರು ಇಖೈರು ತೀರ್ಮಾನ ತೆಗೆದುಕೊಂಡಿಲ್ಲ. ಮಲಪ್ರಭಾ ನೀರನ್ನು ಅದು ಹರಿಯುವ ಜಿಲ್ಲೆಗಳಲ್ಲಿ ಎಂದರೆ, ಧಾರವಾಡಾ, ಬೆಳಗಾಂ, ಬಿಜಾಪುರ, ನವಲಗುಂದ, ಗದಗ ಮತ್ತು ಬಾದಾಮಿ ತಾಲ್ಲೂಕಿನ ಭಾಗಗಳಲ್ಲಿ, ನವಿಲುತೀರ್ಥ ಈ ಪ್ರಾಂತ್ಯದಲ್ಲಿ ಈ ನೀರನ್ನು ಉಪಯೋಗ ಮಾಡಬೇಕೆಂದು ಹೇಳಿ ಅವರೂ ಒಂದು ಯೋಜನೆಯನ್ನು ಹಾಕಿದರು. ಈಚೆಗೆ ಹೊಸ ಮೈಸೂರಾದ ಮೇಲೆ ಈ ವಿಷಯವನ್ನು ಕೂಲಂಕಷವಾಗಿ ಪರಿಶೀಲನೆ ಮಾಡಿ ಇದರಲ್ಲಿ ಅಸೋಗಾ ಸೈಟಿನಲ್ಲಿ ಮಾಡಿದರೆ ಎಷ್ಟು ಪ್ರಾಂತ್ಯಕ್ಕೆ ಉಪಯೋಗವಾಗುತ್ತದೆ, ಬುರೇವಾಡ ಕಡೆ ಮಾಡಿದರೆ ಎಷ್ಟು ಪ್ರಾಂತಕ್ಕೆ ಉಪಯೋಗವಾಗುತ್ತದೆ; ಮಸೋಲಿಯಲ್ಲಿ ಎಂದರೆ ನವಿಲುತೀರ್ಥದಲ್ಲಿ ಮಾಡಿದರೆ ಎಷ್ಟು ಅನುಕೂಲವಾಗುತ್ತದೆ ಎನ್ನುವದನ್ನೆಲ್ಲಾ ಪರಿಶೀಲನೆ ಮಾಡಿ ನವಿಲುತೀರ್ಥದ ಬಳಿಯಲ್ಲಿಯೇ ಒಂದು ಜಲಾಶಯವನ್ನು ಕಟ್ಟಬೇಕೆಂದು ಆಖೈರು ನಿರ್ಧಾರವನ್ನು ತೆಗೆದುಕೊಂಡಿದ್ದೇವೆ. ಇದಕ್ಕೆ ಕಾರಣ, ಎಲ್ಲಕ್ಕಿಂತಲೂ ಬಹಳ ಉತ್ತಮವಾದ ಮತ್ತು ಪ್ರಮುಖವಾಗಿ ಉಪಯೋಗವಾಗುವ ಈ ನದಿಯ ನೀರನ್ನು ಉಪಯೋಗ ಮಾಡಬೇಕೆಂದು ನವಿಲುತೀರ್ಥದ ಜಲಾಶಯ ಮಾಡಿ ಬಲದಂಡೆಯನ್ನು ತೆಗೆಯುವುದರಿಂದ ಮೂರು ಲಕ್ಷ ಎಕರೆಗಳಿಗೆ ನೀರನ್ನು ಒದಗಿಸಬಹುದು ಎನ್ನುವ ಆಖೈರು ನಿರ್ಧಾರವನ್ನು ತೆಗೆದುಕೊಂಡಿದ್ದೇವೆ. ಮತ್ತು ಇತ್ತೀಚೆಗೆ ಅಸೋಗಾ ಬಳಿ ನೀರನ್ನು ಬೆಳಗಾಂ ಜಿಲ್ಲೆಯ ಕೆಲವು ಭಾಗಗಳಿಗೆ ಉಪಯೋಗ ಮಾಡಿಕೊಟ್ಟರೆ ಆ ಪ್ರಾಂತದ ಜನರಿಗೆ ಅನುಕೂಲವಾಗಬಹುದೇ ಎನ್ನುವುದನ್ನು ಈಚೆಗೆ ಪ್ರವಾಸ ಹೋಗಿದ್ದಾಗ ನೋಡಿಕೊಂಡು ಬಂದೆ.

ಅಲ್ಲಿ ಒಂದು ಪಿಕ್ ಅಪ್ ಎಂದರೆ ಒಂದು ಅಣೆಕಟ್ಟನ್ನು ಕಟ್ಟಿದರೆ, ಹತ್ತು ಅಥವಾ ಹನ್ನೆರಡು ಸಾವಿರ

ಎಕರೆಗಳಷ್ಟು ಭೂಮಿಗೆ ನೀರನ್ನು ಒದಗಿಸಲು ಸಾಧ್ಯವೇ ಎನ್ನುವುದನ್ನು ಪರಿಶೀಲನೆ ಮಾಡಿ ಎಂದು ಅಲ್ಲಿನ ಅಧಿಕಾರಿಗಳಿಗೆ ಆಜ್ಞೆ ಮಾಡಿ ಬಂದಿದ್ದೇನೆ. ಇದು ನವಿಲು ತೀರ್ಥಕ್ಕೆ ಸಂಬಂಧಪಟ್ಟಿದಲ್ಲ. ಅಲಾಯುದಾ ಈ ಪ್ರಾಂತದ ಜನಗಳಿಗೆ ಅನುಕೂಲ ಮಾಡುವ ಸಾಧ್ಯಾಸಾಧ್ಯತೆಗಳನ್ನು ನೋಡಿ ಅನುಕೂಲ ಮಾಡಿಕೊಡಬೇಕು. ಈ ನವಿಲುತೀರ್ಥದ ಜಲಾಶಯವನ್ನು ಮಾಡುವುದಕ್ಕೆ ಈಗಿನ ರಿವೈಸ್ಡು ಅಂದಾಜಾ ಪ್ರಕಾರ 25 ಕೋಟಿ ರೂಪಾಯಿಗಳು ವೆಚ್ಚವಾಗಬಹುದು ಎಂದು ಅಂದಾಜಾಗಿದೆ. ಎಂದರೆ ಎಕರೆಯೊಂದಕ್ಕೆ 733 ರೂಪಾಯಿಗಳಷ್ಟು ವೆಚ್ಚವಾಗಬಹುದು ಎಂದು ಅಂದಾಜಾಗಿದೆ. ಅಲ್ಲದೆ ಮಾನ್ಯ ಸದಸ್ಯರಾದ ಶ್ರೀಮಾನ್ ಬಾಳಿಗಾರವರು ಹೇಳಿದಂತೆ ಎಕರೆಗೆ 503 ರೂಪಾಯಿಗಳು ಆಗುವುದೂ ನಿಜವೇ. ಮೊದಲು 15 ಕೋಟಿ ರೂಪಾಯಿಗಳ ಅಂದಾಜಾಗಿತ್ತು. ಇದನ್ನು ಫೈನಲ್ಲಾಗಿ ಪರಿಶೀಲನೆ ಮಾಡಿದ ಮೇಲೆ ಈಚೆಗ 22 ಕೋಟಿ ರೂಪಾಯಿಗಳ ಅಂದಾಜಾಗಿವೆ. ಇದರಂತೆ ಮೂರು ಲಕ್ಷ ಎಕರೆಗಳಿಗೆ ಎಂದರೆ ಸುಮಾರು 733 ರೂಪಾಯಿಗಳಷ್ಟು ಒಂದು ಎಕರೆಗೆ ಬೀಳುತ್ತದೆ.

Sri B. VAIKUNTA BALIGA.—If there is delay, the cost will mount up still higher.

ಶ್ರೀ ಎಚ್. ಎಂ. ಚನ್ನಬಸಪ್ಪ.—ಅಸೋಗಾ ಜಲಾಶಯವನ್ನು ನಿರ್ಮಾಣ ಮಾಡುವುದರಿಂದ 25,851 ಎಕರೆಯಷ್ಟು ಭೂಮಿ ಮುಳುಗಡೆಯಾಗುತ್ತದೆ ಮತ್ತು ಸುಮಾರು 37 ಗ್ರಾಮಗಳು ಮುಳುಗಡೆಯಾಗತಕ್ಕ ಸನ್ನಿವೇಶವಿದೆ. ಆದರೂ ಇದು ಲಾಭದಾಯಕವಾದ ಯೋಜನೆಯೆಂದು ಹೇಳಿ ಸರಕಾರ ಒಂದು ಅಭಿಪ್ರಾಯ ಪಟ್ಟಿದೆ.

Sri M. MALLIKARJUNASWAMY.—What about Technical opinion? Hon'ble Minister was pleased to say that the final decision had been taken by the Government regarding the takning up of this project. I would like to know from the Hon'ble Minister as to whether the technical opinion or an opinion given by the technical men or got by influence.

Sri H. M. CHANNABASAPPA.—Technical opinion can be given by only technical men.

ಸರಕಾರ ನಿರ್ಧಾರ ಮಾಡಬೇಕಾದರೆ Technical opinion ನ್ನನ್ನು ತೆಗೆದುಕೊಳ್ಳದೇ ನಿರ್ಧಾರ ಮಾಡುವುದಿಲ್ಲ ಎನ್ನುವುದು ತಮಗೇ ಗೊತ್ತಿದೆ ಎಂದು ಹೇಳಿದೆ.

Sri M. MALLIKARJUNASWAMY.—Was it feasible in the very nature of the project?

Sri H. M. CHANNABASAPPA.—I am very sorry that the Hon'ble Member does not know the procedure.

Sri M. MALLIKARJUNASWAMY.—Graft is a general feature in a democratic country.

Sri H. M. CHANNABASAPPA.—I did not say that it was impertinent. I can only say that techuical opinion is given by technical men and on their advice, Government takes a decision.

ಇವಿಷ್ಟು ಯೋಜನೆಯ ವಿವರಗಳು. ಇನ್ನು ಯೋಜನೆಯ ಘನತೆಯನ್ನು ಅವರು ಪ್ರಸ್ತಾಪಿಸುತ್ತಾ ಹೇಳುವುದಾದರೆ ಇದು ಉತ್ತಮವಾದ ಯೋಜನೆ ಎಂದು ಸರಕಾರದ ಅಭಿಪ್ರಾಯ. ಅದರಲ್ಲೂ ಧಾರವಾಡ, ಬೆಳಗಾಂ ಮತ್ತು ಬಿಜಾಪುರ ಇವೆಲ್ಲ ಅಭಾವಕ್ಕೆ ಒಳಗಾಗುವ ಪ್ರದೇಶಗಳು. ಇಲ್ಲಿನ ಅಭಾವವನ್ನು ಹೋಗಲಾಡಿಸುವುದಕ್ಕಾಗಿ ಇದಕ್ಕೆ ಹೆಚ್ಚಿನ ಮಹತ್ವವನ್ನು ಕೊಡಲಾಗಿದೆ. ಎರಡನೆಯ ಯೋಜನೆಯಲ್ಲಿ ಆಹಾರೋತ್ಪನ್ನ ಹೆಚ್ಚು ಮಾಡುವ ಯೋಜನೆ ಇರುವುದರಿಂದ ಮತ್ತು ಇಲ್ಲಿರುವ ಭೂಮಿಯು ಉತ್ಕೃಷ್ಟವಾಗಿರುವುದರಿಂದ, ಈ ಭೂಮಿಯನ್ನು ಉಪಯೋಗ ಮಾಡಿಕೊಳ್ಳಬೇಕಾದರೆ ಹೆಚ್ಚಿನ ಪ್ರಮಾಣದಲ್ಲಿ ನೀರನ್ನು ಒದಗಿಸುವುದು ಆವಶ್ಯಕವಾಗಿದೆ. ಇದರ ಬಗ್ಗೆ ಸರಕಾರ ಸಹಾಯ ಮಾಡಲು ಹಿಂಜರಿಯುತ್ತಿಲ್ಲ ಮತ್ತು ಇದಕ್ಕೆ ಯಾವ ಅಭ್ಯಂತರವೂ ಇಲ್ಲ. ಈ ಯೋಜನೆಯನ್ನು ಕಾರ್ಯಗತ ಮಾಡದಿದ್ದ ಪಕ್ಷದಲ್ಲಿ ಆಗ್ಗೆ ಒಂದು ವೇಳೆ ಸರಕಾರ ತನ್ನ ಕರ್ತವ್ಯದಲ್ಲಿ ಲೋಪ ಮಾಡಿದೆ ಎಂದು ಹೇಳಬಹುದಾಗಿತ್ತು. ಇನ್ನೊಂದು ಕಾರಣ, ಉತ್ತರ ಕರ್ನಾಟಕದಲ್ಲಿ ಘಟಪ್ರಭಾ ಒಂದು ಕಡೆ, ಮಲಪ್ರಭಾ ಒಂದು ಕಡೆ ಮತ್ತು ಮುಖ್ಯವಾದ ನದಿಗಳಾದ ನೂತನ ಗಂಗಾ, ಒಂದು ಕಡೆ, ವರದಾ ಮತ್ತು ಕುಮುದ್ವತಿ ಈ ನದಿಗಳ ನೀರು ಹರಿಯುತ್ತಿದೆ ಈ ನೀರನ್ನು ಯಾವ ರೀತಿಯಲ್ಲಿಯದಗೂ ಉಪಯೋಗಿಸಿಕೊಳ್ಳಲಿಲ್ಲವಲ್ಲಾ ಎಂದು ನನ್ನ ಮನಸ್ಸಿಗೆ ಬಹಳ ಪರಿತಾಪ ವಾಯಿತು. ಈ ನದಿಗಳ ದಂಡೆಯಲ್ಲಿರುವ ಭೂಮಿಯಿಂದ ಉತ್ಕೃಷ್ಟವಾದ ದವಸ ಧಾನ್ಯಗಳನ್ನು ಇಲ್ಲಿನ ರೈತರು ಬೆಳೆಯಲು ಪರಿತಾಪ ಪಡಕೂಡದು ಮತ್ತು ಇಂತಹ ಮಹತ್ವವಾದ ನದಿಗಳಿಂದ ಹರಿಯುವ ನೀರು ಸಮುದ್ರಕ್ಕೆಹೋಗಕೂಡದು ಎನ್ನುವುದನ್ನು ಪರಿಶೀಲನೆ ಮಾಡಿ ಮಲಪ್ರಭಾ, ಘಟಪ್ರಭಾ ಯೋಜನೆಗಳನ್ನು ಮಾಡಬೇಕೆಂದು ಯೋಜಿಸಲಾಗಿದೆ ಮತ್ತು ಇಲ್ಲಿ ಹರಿಯುವ ಮುಖ್ಯ ನದಿಗಳಾದ ಕುಮುದ್ವತಿ, ವರದಾ ಈ ನದಿಗಳ ನೀರನ್ನು ಎಷ್ಟರಮಟ್ಟಿಗೆ ಉಪಯೋಗ ಮಾಡಿಕೊಳ್ಳಬಹುದು ಮತ್ತು ಇದರಿಂದ ಅಲ್ಲಿನ ಜನಗಳಿಗೆ ಉಪಯೋಗ ಮಾಡಿಕೊಡಬೇಕೆಂಬುದೇ ಸರಕಾರದ ಆಸೆ ಎಂದು ಮಾನ್ಯ ಸದಸ್ಯರಲ್ಲಿ ತಿಳಿಸಬೇಕೆಂದಿದ್ದೇನೆ. ಇದು ಕೃಷ್ಣಾ ನದಿಯ ಉಪ ನದಿ. ಈ ಕೃಷ್ಣಾ ನದಿಯ ನೀರಿನ ಹಂಚಿಕೆ ರಾಜ್ಯ ಪುನರ್ವಿಂಗಡಣೆಗೆ ಮುನ್ನ ಬೊಂಬಾಯಿ, ಆಂಧ್ರ ಪ್ರದೇಶ, ಮದರಾಸು ಮತ್ತು ಮೈಸೂರು ದೇಶಗಳಿಗೆ ಸೇರಿತ್ತು. ಹಿಂದಿನ ಹೈದರಾಬಾದು ಸಂಸ್ಥಾನಕ್ಕೂ ಈ ಸಂಸ್ಥಾನಗಳಿಗೂ ಕೃಷ್ಣಾ ನದಿಯ ನೀರಿನ ಹಂಚಿಕೆಯಾದದ್ದು 1951ರಲ್ಲಿ. ಅದರಂತೆ ಮದರಾಸು, ಬೊಂಬಾಯಿ, ಹೈದರಾಬಾದು ಮತ್ತು ಮೈಸೂರು ಇಲ್ಲಿನ ಪ್ರದೇಶಗಳಿಗೆ ಕೃಷ್ಣಾ ನದಿಯ ನೀರಿನ ಹಂಚಿಕೆ ಒಳಪಡುತ್ತದೆ. ಆಗ ಕೃಷ್ಣಾ ನದಿಯಲ್ಲಿ ಸಾವಿರ ದಶಲಕ್ಷ ಘನ ಅಡಿಗಳಷ್ಟುಮಟ್ಟದ ವರೆಗೆ ಸಿಗಬಹುದು ಎನ್ನುವುದನ್ನು ವಿಚಾರ ಮಾಡಲಾಗಿತ್ತು. ಇದರಲ್ಲಿ ಹಾಲಿ ಇರತಕ್ಕ ಯೋಜನೆಗಳು ಮತ್ತು ನೀರಾವರಿ ಕಾಮಗಾರಿಗಳು ಮತ್ತು ಮುಂದೆ

(ಶ್ರೀ ಎಚ್. ಎಂ. ಚೆನ್ನಬಸಪ್ಪ)

ಕಟ್ಟತಕ್ಕ ನೀರಾವರಿ ಕಾಮಗಾರಿಗಳಿಗಾಗಿ 744.5 (C.T.M. cft.) ಘನ ಅಡಿಗಳಷ್ಟು ಹಂಚಿಕೆ ಮಾಡಬಹುದು.

4-30 P.M.

ಇನ್ನು ಉಳಿದಿರುವಂಥಾದ್ದು ಒಂದು ಸಾವಿರ T. M. c.ft. ಕೃಷ್ಣಾನದಿಯ ನೀರನ್ನು ಮುಂದೆ ಮಾಡಬೇಕಾದಂತಹ ಯೋಜನೆಗಳಿಗೋಸ್ಕರವಾಗಿ ಮೈಸೂರು, ಬೊಂಬಾಯಿ, ಮದ್ರಾಸ್, ಹೈದರಾಬಾದ್ – ಈ ನಾಲ್ಕು ಪ್ರದೇಶಗಳಿಗೆ ಹಂಚಿಕೆ ಮಾಡಿದರು. ಇದು 1951 ರಲ್ಲಿ ನಡೆದುದು. ಈಚಿಗೆ 1956 ರಲ್ಲಿ ರಾಜ್ಯಗಳ ಪುನರ್ವಿಂಗಡಣೆಯಾದ ಮೇಲೆ ಪರಿಸ್ಥಿತಿ ಬದಲಾವಣೆ ಆಗತಕ್ಕದ್ದು ಎಂದು ಬಂತು. ಈ ಒಂದು ಸಾವಿರ T. M. c.ft. ನೀರನ್ನು ಯಾವ ಯಾವ ರೀತಿ ಹಂಚಿಕೆ ಮಾಡಿತ್ತೋ ಆ ರೀತಿ ಈ ನಾಲ್ಕು ಪ್ರದೇಶಗಳಲ್ಲಿಯೂ ನಮ್ಮ ನಮ್ಮ ಯೋಜನೆಗಳಿಗನುಸಾರವಾಗಿ ಹಂಚಿಕೆ ಮಾಡಿಕೊಂಡೆವು. ಇದರಲ್ಲಿ ಕೆಲವು ಯೋಜನೆಗಳು ಆಂಧ್ರ, ಮದ್ರಾಸ್, ಬೊಂಬಾಯಿ ಪ್ರದೇಶಗಳಿಂದ ಬಂದುವು. ಈ ಯೋಜನೆಗಳು ನಮಗೆ ಬಂದಮೇಲೆ ಅವರು ಎಷ್ಟೆಷ್ಟು ನೀರನ್ನು ಅಲೊಕೇಟ್ ಮಾಡಿದ್ದಾರೆಂಬುದನ್ನು ಪರಿಶೀಲನೆಮಾಡಿ ಈಗ 1959 ರಲ್ಲಿ ಒಂದು ರೀತಿ ವ್ಯವಸ್ಥೆ ಮಾಡಿದ್ದರು. ಈ ವರ್ಷದಲ್ಲಿ ಅದು ಪುನರ್ವಿಮರ್ಶೆ ಮಾಡುವ ಕಾಲ ಬಂದಿದೆ. ಆದುದರಿಂದ ಆ ರೀತಿ ಹಂಚಿಕೆಯಾಗಿರುವುದು ನ್ಯಾಯವೆಂದು ತಾವೆಲ್ಲರೂ ಒಪ್ಪಿಕೊಳ್ಳಬೇಕು. ಈ ರೀತಿಯಾದ ಪುನರ್ವ್ಯವಸ್ಥೆಯಿಂದ ನಮಗೆ ಬರುವ ನೀರನ್ನು ಎಲ್ಲರಿಗೂ ನ್ಯಾಯದಿಂದ ಒದಗಿಸುವುದು ನಮ್ಮ ಕರ್ತವ್ಯ. ಮತ್ತೆ ಈ ಬಗ್ಗೆ ಮೈಸೂರು ಸರ್ಕಾರ ಈಗಾಗಲೇ ಒಂದು ಕಾರ್ಯಕ್ರಮವನ್ನು ಕೈಗೊಂಡು ಕೇಂದ್ರಸರ್ಕಾರ ಮತ್ತು ಸಿ. ಡಬ್ಲ್ಯು.ಪಿ.ಸಿ. ಯವರಲ್ಲಿ ನಮ್ಮ ಹಕ್ಕು ಬಾಧ್ಯತೆ ಎಷ್ಟಿದೆ, ಎಷ್ಟು ನೀರನ್ನು ಕೃಷ್ಣಾನದಿಯಿಂದ ಒದಗಿಸಿಕೊಳ್ಳಬೇಕೆಂಬುದನ್ನು ವಿಮರ್ಶೆ ಮಾಡಿ, ಆ ಬಗ್ಗೆ ವ್ಯವಹಾರ ಮಾಡಿ ಆ ಹಕ್ಕುಬಾಧ್ಯತೆಯನ್ನು ಸಾಧಿಸುವ ಪ್ರಯತ್ನಗಳನ್ನು ಕೈಗೊಂಡಿದ್ದೇವೆ.

ಶ್ರೀ ಪಿ. ಜಿ. ಸಿದ್ಧಾಂತಿ.—ಅದು ಎಷ್ಟರಮಟ್ಟಿಗೆ ಪ್ರೋಗ್ರೆಸ್ ಆಗಿದೆ ?

Sri H. M. CHANNABASAPPA.—All that I can say is that Mysore Government have taken measures well early and also in a concrete manner in order to safeguard the interest of Mysore.

ಇನ್ನು ಸಿ. ಡಬ್ಲ್ಯು. ಪಿ. ಸಿ. ಯವರು ನೀರಿನ ಹಂಚಿಕೆಯ ವಿಷಯದ ಬಗೆ ಒಂದು ಡಿಸಿಷನ್ ತೆಗೆದುಕೊಂಡು ಅದನ್ನು ನಮ್ಮ ಪರಿಶೀಲನೆಗೋಸ್ಕರ ಕಳುಹಿಸಿದ್ದರು. ನಾವು ಅದನ್ನು ಚೆನ್ನಾಗಿ ಪರಿಶೀಲನೆ ಮಾಡಿ ನಮ್ಮ ಅಭಿಪ್ರಾಯಗಳನ್ನು ಕೇಂದ್ರಸರ್ಕಾರಕ್ಕೆ ತಿಳಿಸಿದ್ದೇವೆ. ಕೇವಲ ಸ್ವಲ್ಪ ದಿವಸಗಳಲ್ಲಿಯೇ ಕೇಂದ್ರ ಸರ್ಕಾರದವರು ಒಂದು ಕಮಿಷನ್ನನ್ನು ರಚನೆ ಮಾಡಿ, ಆಲ್ಲೊಂದು ಇಂಟರ್‌ಸ್ಟೇಟ್ ಕಾನ್‌ಫರೆನ್ಸ್ ಏರ್ಪಾಡು ಮಾಡಿ ಎಲ್ಲಾ ಪ್ರತಿನಿಧಿಗಳನ್ನು ಕರೆಸಿ ಕೃಷ್ಣಾನದಿಯಿಂದ ನೀರನ್ನು ಯಾರು ಯಾವ ಯಾವ ರೀತಿಯಲ್ಲಿ ಉಪಯೋಗ ಮಾಡಿಕೊಳ್ಳಬೇಕು ಎಂಬ ಬಗ್ಗೆ ಆಖೈರು ತೀರ್ಮಾನಕ್ಕೆ ಬರಬೇಕಾಗಿದೆ. ಅದು ಅತ್ಯಲ್ಪಕಾಲದಲ್ಲಿ ಅಂತ್ಯ ತೀರ್ಮಾನವಾಗುತ್ತದೆ. ಇದಕ್ಕಾಗಿಯೇ ಇಷ್ಟು ನಿಧಾನವಾಗುತ್ತಿದೆ ಎಂಬುದು ಈಗಿರುವ ಪ್ರಶ್ನೆ.

ಇನ್ನು ಮಲಪ್ರಭಾ ಯೋಜನೆಯನ್ನು ಬೊಂಬಾಯಿ ಸರ್ಕಾರದವರು ದ್ವಿತೀಯ ಪಂಚವಾರ್ಷಿಕ ಯೋಜನೆಯಲ್ಲಿ ಪ್ರಿಲಿಮಿನರಿಯಾಗಿ ಸೇರಿಸಿದ್ದರು. ಅವರು ನಮ್ಮ ರಾಜ್ಯಕ್ಕೆ ಬಂದಮೇಲೆ ನಾವು ದ್ವಿತೀಯ ಪಂಚವಾರ್ಷಿಕ ಯೋಜನೆಯಲ್ಲಿ ಈ ಮಲಪ್ರಭಾ ಯೋಜನೆಯನ್ನು ಸೇರಿಸಿ ಅದಕ್ಕಾಗಿ 100 ಲಕ್ಷ ರೂಪಾಯಿಗಳನ್ನು ಮುಡುಪಾಗಿಟ್ಟಿದ್ದೆವು. ಇದನ್ನು ಮೈಸೂರು ಸೆಕೆಂಡ್ ಪ್ಲಾನ್ ಪುಸ್ತಕದ 262 ನೆಯ ಪುಟದಲ್ಲಿ ತಾವು ನೋಡಬಹುದು. ಆದುದರಿಂದ ಈ ಬಗ್ಗೆ ಸರ್ಕಾರ ತಾತ್ಸಾರ ಮಾಡುತ್ತಿದೆಯೆಂಬ ಅನುಮಾನ ಸಂದೇಹ, ಮಾನ್ಯ ಸದಸ್ಯರ ಮನಸ್ಸಿನಲ್ಲಿ ಯಾವ ರೀತಿಯಲ್ಲೂ ಇರಬಾರದು ಈ ಬಗ್ಗೆ ಅಂದಾಜನ್ನು ಮತ್ತು ಸ್ಕೀಮನ್ನು ತಯಾರುಮಾಡಿ ಪ್ಲಾನಿಂಗ್ ಕಮಿಷನ್ನಿಗೆ ಮತ್ತು ಸಿ.ಡಬ್ಲ್ಯು.ಪಿ.ಸಿ.ಗೆ ಕಳುಹಿಸಿದ ಮೇಲೆ ಅಲ್ಲಿ ಕೆಲವು ಪ್ರಶ್ನೆಗಳನ್ನು ಎತ್ತಿದರೂ ಅವಕ್ಕೆ ಉತ್ತರ ಕೊಡುವುದು ನಮ್ಮ ಕರ್ತವ್ಯ. ಒಂದನೆಯದು ಇದಕ್ಕೆ ಫಾರಿನ್ ಎಕ್ಸ್‌ಚೇಂಜ್ ಬೇಕಾಗುತ್ತದೆ. ಆದಕಾರಣ ಇದನ್ನು ಸ್ವಲ್ಪಮಟ್ಟಿಗೆ ನಿಧಾನಮಾಡಬಹುದು ಎಂಬ ಅಭಿಪ್ರಾಯವನ್ನು ತಿಳಿಸಿದರು. ಇದಕ್ಕೆ 15-20 ಲಕ್ಷ ರೂಪಾಯಿಗಳ ಫಾರೆನ್ ಎಕ್ಸ್‌ಚೇಂಜ್ ಬೇಕಾಗಿದೆ. ಅದೂ ಸಹ ತೃತೀಯ ಪಂಚವಾರ್ಷಿಕ ಯೋಜನೆಗೆ ಬೇಕಾಗಿದೆಯೆಂದು ಹೇಳಿದರು. ಈಗ 15–20 ಲಕ್ಷ ರೂಪಾಯಿಗಳ ಸಣ್ಣ ಫಾರೆನ್ ಎಕ್ಸ್‌ಚೇಂಜು ನಮ್ಮಲ್ಲಿ ಸಿಕ್ಕುವ ಅವಕಾಶವಿದೆ. ಈ ಕಾರಣದಿಂದ ತಾವು ಈ ಯೋಜನೆಯನ್ನು ನಿಲ್ಲಿಸಬೇಕಿಲ್ಲವೆಂದು ನಾವು ಅವರಿಗೆ ಬರೆದು ಆ ಯೋಜನೆಯನ್ನು ಹೇಗಾದರೂ ಮಾಡಿ ಕಾರ್ಯಗತವಾಗುವುದಕ್ಕೆ ಅವಕಾಶವನ್ನು ಮಾಡಿಕೊಡಬೇಕೆಂದು ಕೇಳಿತ್ತು. ಅವರೂ ಕೂಡ ಈ ಕೃಷ್ಣಾನದಿ ನೀರಿನ ಹಂಚಿಕೆಯು ಆಖೈರುವರೆಗೆ ಸ್ವಲ್ಪ ನಿಧಾನ ಮಾಡಿ ಎಂದು ತಿಳಿಸಿದರು. ಈ ಮಧ್ಯೆ ಘಟಪ್ರಭಾ ಯೋಜನೆ ವಿಷಯ ಬಂತು. ಆಗ ಹಿಡ್‌ಕಲ್ ಬಳಿ ಒಂದು ಜಲಾಶಯವನ್ನು ಕಟ್ಟುವುದು ಸ್ವಲ್ಪ ನಿಧಾನವಾಯಿತು. ಹೈದಾರಾಬಾದಿನಲ್ಲಿ ಇರ್ರಿಗೇಷನ್ ಕಾನ್ಫರೆನ್ಸ್ ನಡೆದ ಕಾಲದಲ್ಲಿ ಈ ವಿಷಯವನ್ನು ನಾವು ಪ್ಲಾನಿಂಗ್ ಕಮಿಷನ್ ಮತ್ತು ಕೇಂದ್ರ ಸರ್ಕಾರದವರಲ್ಲಿ ಆಲೋಚನೆ ಮಾಡಿ ಅವರಿಗೆ ನಾವು ನಮ್ಮ ಒಂದು ಖಚಿತ ಅಭಿಪ್ರಾಯವನ್ನು ತಿಳಿಸಿದೆವು. ಮೈಸೂರು ಸರ್ಕಾರಕ್ಕೆ ಕೃಷ್ಣಾನದಿ ನೀರಿನ ಹಂಚಿಕೆಯಾಗುವ ಬಗ್ಗೆ ಮತ್ತು ನಾವು ಘಟಪ್ರಭಾ ಯೋಜನೆಯನ್ನು ತೆಗೆದುಕೊಳ್ಳುವ ಬಗ್ಗೆ ಯಾವುದೂ ಅಡ್ಡಿ ಆಂತಕಗಳು ಇರಕೂಡದೆಂದು ಹೇಳಿದ್ದಕ್ಕೆ, ಅದಕ್ಕೂ ಒಪ್ಪಿಕೊಂಡು ಘಟಪ್ರಭಾ ಯೋಜನೆಯನ್ನು ಇನ್ನು ನೀವು ಪ್ರಾರಂಭ ಮಾಡಬಹುದೆಂದು ಅವರ ಒಪ್ಪಿಗೆಯನ್ನು ನಮಗೆ ಕೊಟ್ಟರು. ಅದರ ಮೇರೆಗೆ ಈಗಾಗಲೇ ಘಟಪ್ರಭಾ ಯೋಜನೆ ಕಾರ್ಯಗತವಾಗುತ್ತದೆ. ಮಲಪ್ರಭಾ ಯೋಜನೆ ಬಗ್ಗೆಯೂ ಸೂಕ್ಷ್ಮವಾಗಿ ಅಲ್ಲಿ ಚರ್ಚೆ ಮಾಡಿದೆ. ಈಚೆಗೆ ಕೃಷ್ಣಾನದಿಯ ನೀರಿನ ಹಂಚಿಕೆಯ ಕಾಲದಲ್ಲಿ ಮಲಪ್ರಭಾ ಯೋಜನೆಯ ಪ್ರಶ್ನೆ ಬೇಡ. ಅದಕ್ಕೋಸ್ಕರವಾಗಿ ಕೃಷ್ಣಾನದಿಯ ನೀರಿನ ಹಂಚಿಕೆಯಾಗುವವರೆಗೆ ಆ ಯೋಜನೆಯ ಪ್ರಶ್ನೆಯನ್ನು ಸ್ವಲ್ಪ ನಿಧಾನ ಮಾಡಿ ಎಂದು ಹೇಳಿದರು. ಅದಕ್ಕನುಗುಣವಾಗಿ ಕೇಂದ್ರ ಸರ್ಕಾರಕ್ಕೆ ಮತ್ತು ಪ್ಲಾನಿಂಗ್ ಕಮಿಷನ್ ಅವರಿಗೆ ಉತ್ತರ ಬರೆದಿದ್ದೇವೆ. ಮೈಸೂರು ಸರ್ಕಾರಕ್ಕೆ ಕೃಷ್ಣಾನದಿಯ ನೀರಿನ

ಹಂಚಿಕೆಯ ಬಗ್ಗೆ ಎಷ್ಟು ನೀರು ಬರುತ್ತದೆ, ಮಲಪ್ರಭಾ ಯೋಜನೆಗೆ ಅವಶ್ಯಕವಾದ ನೀರನ್ನು ಹಂಚಿಕೆ ಮಾಡಿಕೊಳ್ಳುವಾಗ ನಮ್ಮ ಭಾಗ ಏನು, ನಮಗೆ ಒದಗತಕ್ಕ ನೀರಿನಲ್ಲಿ ಎಷ್ಟು ಭಾಗ ಯಾವ ರೀತಿ ಉಪಯೋಗ ಮಾಡಿಕೊಳ್ಳಬೇಕೆಂಬುದು ಮೈಸೂರು ಸರ್ಕಾರಕ್ಕೆ ಸೇರಿರುವ ಪ್ರಶ್ನೆ. ಆದುದರಿಂದ ಈ ಮಲಪ್ರಭಾ ಯೋಜನೆಯನ್ನು ನಿಧಾನ ಮಾಡುವುದು ಸರಿಯಲ್ಲ. ದಯವಿಟ್ಟು ತತ್‌ಕ್ಷಣ ಇದನ್ನು ತೆಗೆದುಕೊಳ್ಳುವುದಕ್ಕೆ ಪರ್ಮಿಷನ್ ಕೊಡಬೇಕೆಂದು ಅವರನ್ನು ಕೇಳಿದ್ದೇನೆ. ಅವರಲ್ಲಿ ನಾವು ಇಷ್ಟು ವಾಗ್ವಾದ ಮಾಡಿ ನಮ್ಮ ಮನೋಭಾವನೆಯನ್ನು ಅವರಿಗೆ ತಿಳಿಸಿದ ಮೇಲೆ ಈಗ ಪ್ಲಾನಿಂಗ್ ಕಮಿಷನ್ನಿನವರು ಒಂದು ಪತ್ರ ಬರೆದಿದ್ದಾರೆ. ನೀರನ್ನು ಯಾವ ರೀತಿ ಮೈಸೂರಿನ ಹಂಚಿಕೆಯೊಳಗೆ ಅಡ್ಜಸ್ಟ್ ಮಾಡುತ್ತೀರಿ, ನೀರನ್ನು ಯಾವ ಯಾವ ರೀತಿಯಲ್ಲಿ ಉಪಯೋಗ ಮಾಡುತ್ತೀರಿ ಯಾವ ಯಾವ ಕ್ರಾಪ್‌ಗಳನ್ನು ಬೆಳೆಯುತ್ತೀರಿ ಮತ್ತು ಪ್ಯಾಟರನ್ ಆಫ್ ಯುಟಿಲೈಸೇಷನ್ ಯಾವ ರೀತಿ ಇದೆ ಎಂಬುದನ್ನು ತಿಳಿಸಿ ಎಂದು ಅದರಲ್ಲಿ ಹೇಳಿದೆ. ಅವೆಲ್ಲಕ್ಕೂ ಉತ್ತರ ಈಗಾಗಲೇ ಹೋಗಿರಬೇಕು. ಆ ರೀತಿ ಇನ್ನೂ ಅವರಿಗೆ ಉತ್ತರ ಹೋಗದೇ ಇದ್ದರೆ, ಇಂದಲ್ಲ, ನಾಳೆ ಹೋಗುತ್ತದೆ. ಅದರ ಜೊತೆಗೆ ನಾನು ಈ ತಿಂಗಳ ಅಂತ್ಯದಲ್ಲಿ ಅಥವಾ ಮುಂದಿನ ತಿಂಗಳ ಪ್ರಾರಂಭದಲ್ಲಿ ಅಲ್ಲಲ್ಲಿರತಕ್ಕ ಇಂಜನಿಯರುಗಳನ್ನು ಕರೆದುಕೊಂಡು ಹೋಗಿ ಈ ವಿಷಯಗಳನ್ನು ದೀರ್ಘವಾಗಿ ಚರ್ಚೆಮಾಡಿ ಇದರ ಬಗ್ಗೆ ತೀವ್ರ ಕಾರ್ಯಕ್ರಮವನ್ನು ತೆಗೆದುಕೊಳ್ಳುವವನಾಗಿದ್ದೇನೆ. ಈ ಮಲಪ್ರಭಾ ಯೋಜನೆಯನ್ನು ಎರಡನೆಯ ಪಂಚವಾರ್ಷಿಕ ಯೋಜನೆಯಲ್ಲಿ ಕಾರ್ಯಗತ ಮಾಡಬೇಕೆಂಬ ವಿಷಯದಲ್ಲಿ ಮಾನ್ಯ ಸದಸ್ಯರಿಗಿಂತಲೂ ಸರ್ಕಾರಕ್ಕೆ ತೀವ್ರಾಭಿಲಾಷೆ ಇದೆಯೆಂದು ಈ ಸಂದರ್ಭದಲ್ಲಿ ನಾನು ಸದಸ್ಯರಿಗೆ ತಿಳಿಲಿಚ್ಛಿಸುತ್ತೇನೆ. ಈ ಬಗ್ಗೆ ಯಾವ ಒಂದು ಅಡ್ಡಿ ಆತಂಕ ಬಂದರೂ ಅದನ್ನು ಯಾವ ರೀತಿಯಲ್ಲಾದರೂ ಬಗೆಹರಿಸಿ ಆ ಯೋಜನೆಯನ್ನು ಕೂಡಲೇ ತೆಗೆದುಕೊಳ್ಳಬೇಕೆಂಬುದರಲ್ಲಿ ದೀರ್ಘಾಲೋಚನೆ ಮಾಡಿ ಆ ಬಗ್ಗೆ ಮತ್ತಾವ ಅಡ್ಡಿಆತಂಕಗಳು ಬಾರದಂತೆ ಮಾಡಿ ಈ ಮಲಪ್ರಭಾ ಯೋಜನೆಯನ್ನು 1960-61 ನೆಯ ಸಾಲನಲ್ಲಿ ಕಾರ್ಯಗತ ಮಾಡಬೇಕೆಂಬ ವಿಷಯದಲ್ಲಿ ಸರ್ಕಾರಕ್ಕೆ ಮಹತ್ತರವಾದ ಆಕಾಂಕ್ಷೆ ಇದೆ.

ಇನ್ನು ಹಣಕಾಸಿನ ವಿಷಯದಲ್ಲಿ ಶ್ರೀಮಾನ್ ವೈಕುಂಠ ಬಾಳಿಗಾ ಅವರು ದೇಶದ ಹಿತದೃಷ್ಟಿಯಿಂದ ಈ ಯೋಜನೆಗಳನ್ನು ಕಾರ್ಯಗತ ಮಾಡುವಾಗ ಅಡ್ಡಿ ಬರಬಾರದು ಎಂದು ಹೇಳಿದರು. ನಿಜ. ಅಡ್ಡಿ ಬರಬಾರದು. I am really very happy that he has taken so much of interest particularly in this project which is very important, essential and remunerative which should not be neglected even for a moment.

ಇನ್ನೊಂದು ವಿಷಯವನ್ನು ಹಣಕಾಸಿನ ವಿಷಯದಲ್ಲಿ ಹೇಳುವುದಾದರೆ ಈಗ ಹಣಕಾಸಿನ ಕೊರತೆ ಇಲ್ಲ. ಆ ಕೊರತೆಯಿಂದ ಈ ಕೆಲಸವನ್ನು ನಿಲ್ಲಿಸಿಲ್ಲ. ಇದಕ್ಕೋಸ್ಕರವಾಗಿ ಎರಡನೆಯ ಪಂಚವಾರ್ಷಿಕ ಯೋಜನೆಯಲ್ಲಿ 1 ಕೋಟಿ ರೂಪಾಯಿಗಳನ್ನು ಈ ಯೋಜನೆಗೆ ಒದಗಿಸಿದ್ದೇವೆ. ಈಗ ಆ ಹಣ ಹಾಗೆಯೇ ಇದೆ. ಹಣದ ಅಭಾವದಿಂದ ಕೆಲಸವನ್ನು ಹಿಂತೆಗೆದು ನಿಲ್ಲಿಸಿದ್ದೇವೆಂಬ ಸಂದೇಹ ಯಾರಿಗಾದರೂ ಇದ್ದರೆ, ಅದನ್ನು ಬಿಟ್ಟುಬಿಡಿ. ನಾವು ಈ ವಿಷಯದಲ್ಲಿ ತಾಂತ್ರಿಕ ಸಲಹೆಗಳನ್ನು ಪಡೆದು ಈ ಯೋಜನೆಯನ್ನು ಕಾರ್ಯಗತ ಮಾಡುತ್ತಿದ್ದೇವೆ. ಈ ವಿಷಯ not merely to the Central Government but also to the State Governmentಗೆ ಗೊತ್ತಿದೆ. ಈ ಬಗ್ಗೆ They are the highest technical advisers ಎಂದು ತೀರ್ಮಾನವಾಗಿದೆ.

Sri B. VAIKUNTA BALIGA.—That is only with regard to the details of the schemes.

ಶ್ರೀ ಎಚ್. ಎಂ. ಚನ್ನಬಸಪ್ಪ.—ಹೌದು. ಈ ಸಂದರ್ಭದಲ್ಲಿ ತಜ್ಞರ ಸಲಹೆಗಳನ್ನೂ, ಟೆಕ್ನಿಕಲ್ ಅಡ್ವೈಸರುಗಳ ಸಲಹೆಗಳನ್ನೂ, ಪ್ಲಾನಿಂಗ್ ಕಮಿಷನ್ ಮತ್ತು ಕೇಂದ್ರ ಸರ್ಕಾರದ ಸಲಹೆಗಳನ್ನೂ ತೆಗೆದುಕೊಳ್ಳಬೇಕು. ಏಕೆಂದರೆ ಅವರ ಸಲಹೆಗಳು ಬಹುತೇಕ ನಮಗೆ ಹೆಚ್ಚಿನ ಮಟ್ಟಿಗೆ ಸಹಾಯವಾಗುತ್ತವೆಂದು ನಾನು ತಿಳಿಸುತ್ತಿದ್ದೇನೆ. ಎರಡನೆಯದಾಗಿ ಪ್ಲಾನಿಂಗ್ ಕಮಿಷನ್ನಿನವರ ಮನೋಭಾವ ಈ ಬಗ್ಗೆ ಸ್ವಲ್ಪಮಟ್ಟಿಗೆ ಸಹಾಯವಾಗುತ್ತಲಿದೆ ಎಂಬುದನ್ನು ಸಹ ಈ ಸಂದರ್ಭದಲ್ಲಿ ಹೇಳಬೇಕಾಗಿದೆ.

ಆದುದರಿಂದ ತಾವುಗಳಾರೂ ಈ ವಿಚಾರದಲ್ಲಿ ದಿಂದ ಯಾವ ಅನುಮಾನವನ್ನೂ ಇಟ್ಟುಕೊಳ್ಳಬಾರದೆಂದು ಹೇಳುತ್ತೇನೆ. ಈ ದಿವಸ ಈ ನಿರ್ಣಯವಾದರೂ ಒಂದು ಸರಿಯಾದ ರೀತಿಯಲ್ಲಿ ಬಂದಿದ್ದರೆ ಇದನ್ನು ಒಪ್ಪಿಕೊಳ್ಳುತ್ತಿದ್ದೆ. ಆದರೆ ಈಗ ಈ ನಿರ್ಣಯ ಬಂದಿರತಕ್ಕ ರೀತಿಯಲ್ಲೇ ನಾನು ಇದನ್ನು ಒಪ್ಪಿಕೊಳ್ಳುವುದಕ್ಕಾಗುವುದಿಲ್ಲ. ಈಗ ಮಾನ್ಯ ಸದಸ್ಯರು ತಂದಿರತಕ್ಕ ನಿರ್ಣಯದಲ್ಲಿ ಪದಗಳು ಹೀಗಿರುತ್ತವೆ "without waiting for its being included in the Third Five-Year Plan" ಎಂದು ಹೇಳಿರುತ್ತಾರೆ. ನಾವು ಈ ಯೋಜನೆಯನ್ನು ದ್ವಿತೀಯ ಪಂಚವಾರ್ಷಿಕ ಯೋಜನೆಯಲ್ಲೇ ತೆಗೆದುಕೊಳ್ಳಬೇಕೆಂದು ಪ್ರಯತ್ನಗಳನ್ನು ನಡೆಸುತ್ತಿರುವಾಗ ಮಾನ್ಯ ಸದಸ್ಯರು ಮೂರನೆಯ ಪಂಚವಾರ್ಷಿಕ ಯೋಜನೆಗೆ ಕಾಯಬೇಡಿ ಎಂದು ಹೇಳಿದ್ದಾರೆ. ಈಗಾಗಲೇ ಈ ನಿರ್ಣಯವನ್ನು ತಂದಿರತಕ್ಕ ಮಾನ್ಯ ಸದಸ್ಯರು ಹೇಳಿರುವಂತೆ ಎರಡನೆಯ ಪಂಚವಾರ್ಷಿಕ ಯೋಜನೆಯಲ್ಲೇ ಇದು ಸ್ಪಿಲ್ ಓವರ್ ಆಗಿರುತ್ತದೆ. ಆ ರೀತಿ ಈಗಾಗಲೇ ಸರ್ಕಾರ ಎಲ್ಲ ಪ್ರಯತ್ನಗಳನ್ನೂ ನಡೆಸಿದೆ. ಹಾಗಿರುವಾಗ ಈ ಯೋಜನೆಯ ವಿಚಾರದಲ್ಲಿ ಸರ್ಕಾರದವರಿಗೆಷ್ಟು ತೀವ್ರ ಅಭಿಲಾಷೆಯಿದೆ ಎಂಬುದನ್ನು ಮಾನ್ಯ ಸದಸ್ಯರು ತಿಳಿದುಕೊಳ್ಳಬಹುದು. ಈಗಾಗಲೇ ಸರ್ಕಾರ ಈ ಮಾರ್ಗದಲ್ಲಿ ಸಾಕಷ್ಟು ಪ್ರಯತ್ನ ನಡೆಸಿದೆಯೆಂದು ಹೇಳಲಿಚ್ಛಿಸುತ್ತೇನೆ. ಹಾಗಿರುವಾಗ ಸರ್ಕಾರದವರು ಪ್ರತ್ಯೇಕವಾಗಿ ಈ ದಿವಸ ಇಂಥ ಒಂದು ನಿರ್ಣಯವನ್ನು ಒಪ್ಪಿಕೊಳ್ಳುವುದರಲ್ಲೇನೂ ಅಭ್ಯಂತರವಿರಲಿಲ್ಲ. ಆದರೆ ನಾವು ಕೈಗೊಳ್ಳುವ ಕೆಲಸ ಸುಗಮವಾಗಿ ನಡೆಯಬೇಕಾಗಿರುವುದರಿಂದ ನಾವು ಈಗ C. W. P. C. ಮತ್ತು ಪ್ಲಾನಿಂಗ್ ಕಮಿಷನ್ನಿನವರ ಹಾಗೂ ಕೇಂದ್ರ ಸರ್ಕಾರದವರ ಅಡ್ಮಿನಿಸ್ಟ್ರೇಟೀವ್ ಕ್ಲಿಯರೆನ್ಸ್ ತೆಗೆದುಕೊಂಡು ಈ ಕಾರ್ಯ ಪ್ರಾರಂಭ ಮಾಡುವುದು ಒಳ್ಳೆಯದೆಂದು ಭಾವಿಸಿದ್ದೇವೆ. ಈ ವಿಚಾರಗಳನ್ನೆಲ್ಲ ಆದಷ್ಟು ಬೇಗ ನಾವು ಬರುಮಾಡಿಕೊಂಡು ನಾವು ಈ ಕಾರ್ಯವನ್ನಾರಂಭಿಸಿದರೆ ಆಗ ಈ ಕೆಲಸ ಸುಸೂತ್ರವಾಗಿ ನಡೆಯುತ್ತದೆ. ಆದರೆ ಈ ಸಂದರ್ಭದಲ್ಲಿ ಶ್ರೀಮಾನ್

(ಶ್ರೀ ಎಚ್. ಎಂ. ಚನ್ನಬಸಪ್ಪ)

P. G. ಸಿದ್ಧಾಂತಿಯವರು ಸರ್ಕಾರ ಪ್ಲಾನ್‌ಕೋರ್‌ನಲ್ಲಿ ಸೇರದೆ ಇದ್ದಂಥ ಶರಾವತಿ ವ್ಯಾಲಿಯ ಕೆಲಸವನ್ನು ಕೈಗೊಂಡು ಕೋರಿನಲ್ಲಿ ಸೇರಿದ್ದ ಈ ಕೆಲಸವನ್ನು ಕೈಬಿಟ್ಟಿದ್ದಾರೆಂದು ಹೇಳಿದರು. ಆದರೆ ಶರಾವತಿ ವ್ಯಾಲಿಯ ವಿಚಾರದಲ್ಲಿ ಫಾರಿನ್ ಎಕ್ಸ್‌ಛೇಂಜ್‌ನ ತೊಂದರೆಯಿದ್ದ ಕಾರಣ ಅದನ್ನು ತೆಗೆದುಕೊಳ್ಳಬೇಕಾಗಿ ಬಂತು. ಆದರೆ ಈ ಯೋಜನೆಗೆ ಅಂಥ ಫಾರಿನ್ ಎಕ್ಸ್‌ಛೇಂಜ್ ತೊಂದರೆಯಿರುವುದಿಲ್ಲ. ಹಣದ ತೊಂದರೆಯೂ ಸಹ ಇರುವುದಿಲ್ಲ. ಆದರೆ ನಮಗೆ ಕೆಲವು ಕ್ಲಿಯರೆನ್ಸ್‌ಗಳು ಬರಬೇಕಾಗಿದೆ. ಅವುಗಳು ಬಂದಕೂಡಲೇ ಈ ಕಾರ್ಯವನ್ನು ಪ್ರಾರಂಭ ಮಾಡೋಣವೆಂದುಕೊಂಡಿದ್ದೇವೆ. ಬಹುಶಃ ಈ ತಿಂಗಳ ಕೊನೆಯಲ್ಲೋ ಅಥವಾ ಮುಂದಿನ ತಿಂಗಳ ಪ್ರಾರಂಭದಲ್ಲೋ ನಾನೇ ದೆಹಲಿಗೆ ಖುದ್ದಾಗಿ ಹೋಗಿ ಇದನ್ನು ಕಾರ್ಯಗತ ಮಾಡಿಕೊಂಡು ಬರುವುದಕ್ಕೆ ಪ್ರಯತ್ನ ಮಾಡುತ್ತೇನೆಂಬ ಭರವಸೆಯನ್ನು ಮಾನ್ಯ ಸದಸ್ಯರಿಗೆ ಕೊಟ್ಟಮೇಲೆ ಅವರು ತಮ್ಮ ನಿರ್ಣಯವನ್ನು ವಾಪಸ್ಸು ತೆಗೆದುಕೊಳ್ಳುತ್ತಾರೆಂದು ನಂಬಿದ್ದೇನೆ.

ಶ್ರೀ ಎ. ಎಸ್. ಪಾಟೀಲ್ (ನರಗುಂದ).—ಅಧ್ಯಕ್ಷರೇ, ಮಾನ್ಯ ಮಂತ್ರಿಗಳು ಈ ಮಲಪ್ರಭಾ ಯೋಜನೆಯನ್ನು ಅತಿ ತೀವ್ರವಾಗೇ ಕೈಗೊಳ್ಳಲಾಗುತ್ತದೆಂಬ ಭರವಸೆಯನ್ನು ಕೊಟ್ಟಿರುವುದರಿಂದ ನಾನು ಈ ನಿರ್ಣಯವನ್ನು ವಾಪಸ್ಸು ತೆಗೆದುಕೊಳ್ಳಲು ಸಭೆಯ ಅನುಮತಿಯನ್ನು ಬೇಡುತ್ತೇನೆ.

ಶ್ರೀ ಎ. ಜೆ. ದೊಡ್ಡಮೇಟಿ (ರೋಣ್).—ನಾನೂ ನನ್ನ ತಿದ್ದುಪಡಿಯನ್ನು ವಾಪಸ್ಸು ಪಡೆಯಲು ಅನುಮತಿ ಬೇಡುತ್ತೇನೆ.

Mr. SPEAKER.—The Hon'ble member Sri A. S. Patil who has been authorised by the Hon'ble Member who has moved this resolution wants to withdraw the resolution and the Hon'ble member Sri A. J. Doddameti who has moved an amendment to the resolution also wants to withdraw his amendment. Have they the permission of the House to withdraw the amendment and the resolution ?

The resolution and the amendment were by leave of the House, withdrawn.

Non-official. Resn. re. rehabilitation of people likely to be affected under Rakaskop Water Scheme.

(Sri L. B. Birje moved the following resolution in Marathi.)

[Sri L. B. BIRJE (Khanapur).—(*in Marathi*) I beg to move the following resolution :

"That this Assembly recommends to Government to take immediate steps to rehabilitate the people who are affected due to submersion of their lands and houses in the Rakaskop Water Scheme."]

Mr. SPEAKER.—Motion moved :

"That this Assembly recommends to Government to take immediate steps to rehabilitate the people who are affected due to submersion of their lands and houses in the Rakaskop Water Scheme."

(Sri L. B. BIRJE spoke in Marathi.)

ಶ್ರೀ ಎಚ್. ಎಂ. ಚನ್ನಬಸಪ್ಪ (ಲೋಕೋಪಯೋಗಿ ಶಾಖಾಸಚಿವರು).—ಅಧ್ಯಕ್ಷರೇ, ಅವರು ಮರಾಠಿ ಭಾಷೆಯಲ್ಲಿ ಮಾತನಾಡಿದರೆ ನನಗೆ ಏನೇನೂ ಅರ್ಥವಾಗುವುದಿಲ್ಲ. ಆದುದರಿಂದ ಅವರಿಗೆ ನಾನು ಉತ್ತರ ಕೊಡಬೇಕಾದರೆ ಬಹಳ ಕಷ್ಟವಾಗುತ್ತದೆ.

ಅಧ್ಯಕ್ಷರು.—ಆದರೆ ನಾನು ಅವರಿಗೆ ಇಂಥ ಭಾಷೆಯಲ್ಲೇ ಮಾತನಾಡಿ ಎಂದು ಒತ್ತಾಯ ಮಾಡಲಿಕ್ಕೆ ಬರುವುದಿಲ್ಲ. ನನಗೇನೋ ಮರಾಠಿ ತಿಳಿಯುತ್ತದೆ. ಆದರೆ ಅದನ್ನು ತಮಗೆ ಹೇಗೆ ತಿಳಿಸುವುದು ?

(Sri L. B. BIRJE continued his speech in Marathi.)

5 P.M.

* Sri V. S. PATIL (Belgaum-I).—Sir, I support the resolution moved by my friend Sri Birje for the rehabilitation of the people who are being affected by this water-scheme at Rakaskop. I need not go into the merits or demerits of the scheme, because of the fact that it is meant for supplying water to Belgaum City, which was in need of such a scheme not only recently, but I can say, for the last hundred years. I have read in the *Times of India* that there was scarcity in Belgaum City in 1853. So this scheme was required to be taken up and several attempts were actually made till 1914 for the implementation of this particular scheme. The scheme was ready at the time of the merger of our area into Mysore State. It has been actually implemented by the enthusiastic Minister for Public Works for which I must thank him on behalf of the people of Belgaum. But at the same time, I have to bring to his notice that due to the implementation of this scheme, several villagers are being affected and especially agriculturists. My friend Mr. Birje has narrated the population, acreage